# ಅಧ್ಯಾಪಕ ಪಠ್ಯ

# TEACHER TEXT

## ತರಗತಿ X - I

### ಘಟಕ 1

## ಕಾಡಿನ ಒಡಲು

# ತರಗತಿ – X

## ಕನ್ನಡ – I

**ಘಟಕ –1** – **ಕಾಡಿನ ಒಡಲು**

- ಬೆಟ್ಟದ ತಲೆ ಮುಟ್ಟಿದಾಗ

**ಘಟಕ –2** – **ಬಾಳ ಬೆಳಕು**

- ವಚನ ಸಿರಿ
- ಮನಃಪರಿವರ್ತನೆ
- ಕೃಷಿ ಒಂದು ಜೀವನ ಮಾರ್ಗ

**ಘಟಕ –4** – **ಕಲ್ಲರಳಿ ಹೂವಾಗಿ**

- ಶಬ್ದವೇ ಇಲ್ಲದ ಕವಿತೆ
- ಮುಳ್ಳಿಡಿದ ಮರನೇರಿದಂತಾದುದು
- ಕಾಲಪುರುಷನ ಲೀಲೆ

**ಘಟಕ –5** – **ಕರುಣೆಯ ಬೆಳಕು**

- ಕಾಯ್ದು ಬೆನ್ನೀರ್ ಮನೆಸುಡದು

## ಕನ್ನಡ – II

**ಘಟಕ –1** – **ಜೀವನ ಪ್ರೀತಿ**

- ಗುಪ್ತದಾನಿ
- ಎಲ್ಲಿ ಹೋದರೋ ಅವರು ಎಂದು ಬರುವರು?

**ಘಟಕ –2** – **ಕಲ್ಲರಳಿ ಹೂವಾಗಿ**

- ಬಾದಾಮಿ ಗುಹೆಯ ಬಳಿ
- ಹೀಗೊಂದು ಕನಸು ಹೀಗಿದೆ ಜೀವನ
- ಕಾಯಕ ನಿಷ್ಠೆ

**ಘಟಕ –3** – **ವಿಜ್ಞಾನ ದರ್ಪಣ**

- ಮೊಳಕೆಯ ಸಿರಿ
- ಸಂದರ್ಶನ ಕೌಶಲ

# ಬೆಟ್ಟದ ತಲೆ ಮುಟ್ಟಿದಾಗ

## ಪ್ರಬಂಧ ಬರೆಯುವುದು

ಚಟುವಟಿಕೆಯಲ್ಲಿ ನೀಡಲಾದ ಚಿತ್ರಗಳನ್ನು ವಿದ್ಯಾರ್ಥಿಗಳು ಗಮನಿಸಲಿ.

- ಅಧ್ಯಾಪಕ ವಿದ್ಯಾರ್ಥಿ ಸಂವಹನ
  - ಚಿತ್ರದಲ್ಲಿ ಕಾಣುವ ದೃಶ್ಯ ಯಾವುದರ ಕುರಿತಾಗಿದೆ?
  - ನಾಲ್ಕು ಚಿತ್ರಗಳ ವಿಶೇಷತೆಗಳೇನು?
  - ಇಂತಹ ಪ್ರಾಕೃತಿಕ ವಿಕೋಪಗಳ ಕುರಿತು ವಾರ್ತಾಪತ್ರಿಕೆಗಳಲ್ಲಿ ಓದಿರುವಿರಾ?
  - ಇದಕ್ಕೆ ಕಾರಣಗಳೇನಾಗಿರಬಹುದು?
  - ಇದನ್ನು ಹೇಗೆ ಪರಿಹರಿಸಬಹುದು?

ಇತ್ಯಾದಿ ಪ್ರಶ್ನೆಗಳನ್ನು ಕೇಳುವ ಮೂಲಕ ಪ್ರಕೃತಿ ಮತ್ತು ಪ್ರಾಕೃತಿಕ ವಿಕೋಪಗಳ ಕುರಿತು ತಿಳಿದುಕೊಳ್ಳುವುದು.

## ಪ್ರಾಕೃತಿಕ ವಿಕೋಪಗಳು – ಕಾರಣಗಳು ಮತ್ತು ಪರಿಹಾರ

ಮಾನವನು ಪ್ರಕೃತಿಯ ಒಂದು ಅಂಗ. ಬುದ್ಧಿವಂತಿಕೆಯ ಆಧಾರದ ಮೇಲೆ ಆತನನ್ನು ಉಳಿದ ಪ್ರಾಣಿಗಳಿಗಿಂತ ಮೇಲೆಂದು ಪರಿಗಣಿಸಲಾಗಿದೆ. ಆದಿ ಮಾನವನು ಪ್ರಕೃತಿಯ ಆರಾಧಕನಾಗಿದ್ದನು. ಇಂದು ಮಾನವನು ಪ್ರಕೃತಿಯನ್ನು ಅವಲಂಬಿಸದೆ ಕೃತಕ ವಸ್ತುಗಳ ಗುಲಾಮನಾಗಿದ್ದಾನೆ. ಹಾಗೆಯೇ ಪ್ರಕೃತಿಗೂ ಕಂಟಕನಾಗಿದ್ದಾನೆ. ಕಾಡಿನ ನಾಶ, ಬೆಟ್ಟಗಳನ್ನು ಅಗೆದು ನೆಲಸಮಗೊಳಿಸುವುದು, ವಿವಿಧ ಯಂತ್ರೋಪಕರಣಗಳ ಆವಿಷ್ಕಾರ ಮತ್ತು ಬಳಕೆ, ವಿಪುಲವಾಗಿ ಅನಧಿಕೃತ ಬಹುಮಹಡಿ ಕಟ್ಟಡಗಳ ನಿರ್ಮಾಣ ಇತ್ಯಾದಿಗಳು ಪ್ರಕೃತಿಯ ನಾಶಕ್ಕೆ ಕಾರಣವಾಗುತ್ತದೆ.

ಮಾನವ ಹೊಸ ಹೊಸ ಆವಿಷ್ಕಾರಗಳನ್ನು ನಡೆಸುವುದು ಒಳ್ಳೆಯದೇ ಆದರೂ ಅದು ಪರಿಸರ ಸ್ನೇಹಿ ಆಗುವ ಬದಲು, ಪರಿಸರಕ್ಕೆ ಮಾರಕವಾಗುವುದು ವಿಪರ್ಯಾಸದ ಸಂಗತಿ. ವಾಹನಗಳಿಂದ ಹಾಗೂ ಕಾರ್ಖಾನೆಗಳಿಂದ ಹೊರಹೊಮ್ಮುವ ರಾಸಾಯನಿಕ ವಸ್ತುಗಳು, ಇಂಗಾಲದ ಡೈ ಆಕ್ಸೈಡ್‌ನ್ನು ಹೀರಿ ಜೀವ ಅನಿಲವಾದ ಆಮ್ಲಜನಕವನ್ನು ಉತ್ಪತ್ತಿ ಮಾಡುವ ಮರಗಳ ಕೊರತೆ ವಾತಾವರಣದಲ್ಲಿ ಉಷ್ಣಾಂಶ ಏರಲು ಕಾರಣವಾಗಿದೆ. ಇದರ ಪರಿಣಾಮವಾಗಿ ಹಿಮಪ್ರದೇಶಗಳು ಕರಗಿ ಸಾಗರದ ಜಲಮಟ್ಟ ಹೆಚ್ಚಾಗಬಹುದು. ಸಾಗರದ ಜಲಮಟ್ಟವು ಒಂದಡಿಯಷ್ಟು ಹೆಚ್ಚಾದರೆ ಎಷ್ಟೋ ಕರಾವಳಿ ಪ್ರದೇಶಗಳು ಮುಳುಗಡೆಯಾಗಬಹುದು. ಕೆಲವು ಕಡೆ ಅತಿವೃಷ್ಟಿಯೂ ಇನ್ನು ಕೆಲವು ಕಡೆ ಅನಾವೃಷ್ಟಿಯೂ ಉಂಟಾಗಿ ಪ್ರಕೃತಿಯಲ್ಲಿ ಏರುಪೇರುಗಳುಂಟಾಗಬಹುದು. ವಾತಾವರಣದಲ್ಲಿ ಉಷ್ಣತೆ ಹೆಚ್ಚಾಗುವುದರಿಂದ ಕೆಲವು ಜೀವಜಾಲಗಳು ನಾಶಹೊಂದಬಹುದು. ಉದಾಹರಣೆಗೆ ಶೈತ್ಯ ಪ್ರದೇಶಗಳಲ್ಲಿ ವಾಸಿಸುವ ಪೆಂಗ್ವಿನ್ ಮುಂತಾದ ಪ್ರಾಣಿ ಪಕ್ಷಿಗಳ ಸಂತತಿ ಅಳಿಯಬಹುದು. ಅದೇ ರೀತಿ ಕೆಲವು ಸಸ್ಯಪ್ರಭೇದಗಳೂ ಅಳಿಯಬಹುದು. ಇಂದು ಸಹಜ ಸಸ್ಯಗಳನ್ನು ನಾಶಗೊಳಿಸಿ, ಕೃತಕ ಸಸ್ಯಗಳನ್ನೂ ಬೆಳೆಸುತ್ತಿದ್ದೇವೆ. ಇದರಿಂದ

ಅಂತರ್ಜಲ ಕಡಿಮೆಯಾಗುವುದಲ್ಲದೆ ಮೇಲ್ಮಣ್ಣು ಸಡಿಲಗೊಳ್ಳುತ್ತದೆ. ಇದು ಭೂಕುಸಿತಕ್ಕೆ ಕಾರಣವಾಗುತ್ತದೆ. ಇತ್ತೀಚೆಗಿನ ವರ್ಷಗಳಲ್ಲಿ ಕರ್ನಾಟಕ, ಕೇರಳದ ಹಲವೆಡೆ ಬೆಟ್ಟ ಪ್ರದೇಶಗಳಲ್ಲಿ ಭೂಕುಸಿತವುಂಟಾದುದನ್ನು ಇಲ್ಲಿ ಸ್ಮರಿಸಬಹುದು.

ಯಾವಾಗ ಮನುಷ್ಯನು ಸಹನೆಯ ಮಿತಿಯನ್ನು ಮೀರಿ ವರ್ತಿಸುವನೋ, ಆ ಸಂದರ್ಭದಲ್ಲಿ ಪ್ರಕೃತಿ ನೀಡುವ ಪ್ರತ್ಯುತ್ತರವೇ ಬರಗಾಲ, ಅತಿವೃಷ್ಟಿ, ಸುಂಟರಗಾಳಿ, ಭೂಕಂಪ, ಜಲಪ್ರಳಯ ಇತ್ಯಾದಿ. ವಿಜ್ಞಾನವು ಮಾನವ ಲೋಕಕ್ಕೆ ವಿವಿಧ ಕೊಡುಗೆಗಳನ್ನು ನೀಡಿದೆ. ಆದರೆ ಮಾನವನು ಅತಿಯಾಸೆಯಿಂದ ಅವುಗಳನ್ನು ದುರ್ಬಳಕೆ ಮಾಡುತ್ತಿದ್ದಾನೆ. ತುಂಬಾ ಆಡಂಬರದ ಜೀವನ ಶೈಲಿಯನ್ನು ಬಯಸುತ್ತಾನೆ. ಇದರಿಂದಾಗಿ ವಿವಿಧ ಅನಗತ್ಯ ವಸ್ತುಗಳನ್ನು ಖರೀದಿಸುತ್ತಾನೆ. ಇಲೆಕ್ಟ್ರಾನಿಕ್ ವಸ್ತುಗಳು, ಪ್ಲಾಸ್ಟಿಕ್ ವಸ್ತುಗಳು ಇವುಗಳು ಪ್ರಕೃತಿಯ ಮೇಲೆ ದುಷ್ಪರಿಣಾಮವನ್ನು ಬೀರುತ್ತವೆ. ನೀರು ಇಂಗಲು ಬಿಡದೆ ಸಸ್ಯಗಳ ಬೇರುಗಳನ್ನು ಮಣ್ಣಿನೊಳಗೆ ಇಳಿಯಲೂ ಬಿಡದೆ ಮಣ್ಣನ್ನು ತೀವ್ರತರದಲ್ಲಿ ಕಲುಷಿತಗೊಳಿಸುತ್ತವೆ ಮತ್ತು ಪ್ರಾಕೃತಿಕ ವಿಕೋಪಗಳಿಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕಾರಣವಾಗುತ್ತದೆ. ಇವುಗಳನ್ನು ಅಳಿಸಲು ಸಾಧ್ಯವಾಗುತ್ತಿಲ್ಲ.

ಭೂಮಿಗೆ ನೈಸರ್ಗಿಕವಾಗಿ ನೀರನ್ನು ಹೀರಿಕೊಳ್ಳುವ ಗುಣವಿರುತ್ತದೆ. ಕೆರೆಗಳು ಈ ಮಹತ್ತರ ಕಾರ್ಯವನ್ನು ನಿರ್ವಹಿಸುತ್ತವೆ. ಆದರೆ ನಗರೀಕರಣ ಪ್ರಕ್ರಿಯೆಗೆ ಬಲಿಯಾಗಿ ಬಹುತೇಕ ಎಲ್ಲಾ ಕೆರೆಗಳೂ ಕಾಂಕ್ರೀಟು ಕಾಡುಗಳಾಗಿವೆ. ಮಳೆನೀರನ್ನು ಹೀರಿಕೊಳ್ಳಲು ಅಗತ್ಯವಾದ ಅರಣ್ಯ ಸಂಪತ್ತು ಬರಿದಾಗಿದೆ. ಕೆರೆಗಳು ಬತ್ತಿಹೋಗಿವೆ, ಬಾವಿಗಳು ಬರಿದಾಗಿವೆ. ಹಾಗಾಗಿ ಭಾರೀ ಮಳೆ ಬಂದಾಗಲೆಲ್ಲಾ ನೀರು ಭೂಮಿಯ ಮೇಲ್ಭಾಗದಲ್ಲೇ ಹರಿಯುವುದರಿಂದ ಪ್ರವಾಹ ಪರಿಸ್ಥಿತಿ ಉಂಟಾಗುತ್ತದೆ. ನಗರಗಳಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿ ಇಲ್ಲದಿರುವುದರಿಂದ ಅಲ್ಪ ಪ್ರಮಾಣದ ಮಳೆ ಬಂದರೆ ರಸ್ತೆಯಲ್ಲಿ ನೀರು ತುಂಬಿ ಕೃತಕ ನೆರೆ ಉಂಟಾಗುತ್ತದೆ. ಬಡಾವಣೆಗಳನ್ನು ನಿರ್ಮಿಸುವ ಭರದಲ್ಲಿ ಬೆಟ್ಟ ಗುಡ್ಡ ಪ್ರದೇಶಗಳನ್ನು ಸಮತಟ್ಟು ಮಾಡದೆ ನಿರ್ಮಿಸುವುದರಿಂದಲೂ ತಗ್ಗಿನ ಪ್ರದೇಶದ ಮನೆಗಳು ಶೀಘ್ರ ಜಲಾವೃತವಾಗುತ್ತವೆ ಮತ್ತು ಭೂಕುಸಿತವೂ ಉಂಟಾಗುತ್ತದೆ.

ಪ್ರಾಕೃತಿಕ ವಿಕೋಪಗಳನ್ನು ತಡೆಯುವುದು ಮಾನವನಿಗೆ ಅಸಾಧ್ಯವಾದರೂ ಪೂರ್ವಸಿದ್ಧತೆ ನಡೆಸಿದಲ್ಲಿ ಸಾವು ನೋವುಗಳನ್ನು ತಪ್ಪಿಸಬಹುದು. ಪ್ರತಿ ಮಳೆಗಾಲಕ್ಕೆ ಮುನ್ನ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕು. ಪ್ರತಿಯೊಂದು ಸಂಶೋಧನೆಯಲ್ಲೂ ಅದರ ಸಾಧಕ ಬಾಧಕಗಳನ್ನು ಕಂಡುಕೊಳ್ಳಬೇಕು. ಪ್ರಕೃತಿಗೆ ಹಾನಿಯುಂಟುಮಾಡುವ ಯಾವುದೇ ವಸ್ತುಗಳನ್ನು, ಉಪಕರಣಗಳನ್ನು ತಯಾರಿಸದಂತೆ ನಿಷೇಧಿಸಬೇಕು. ಸಹಜ ಸಸ್ಯಗಳನ್ನು ನೆಟ್ಟು ಬೆಳೆಸಬೇಕು. ಗುಡ್ಡಗಳ ಅಗೆತವನ್ನು ಆದಷ್ಟು ಕಡಿಮೆಗೊಳಿಸಬೇಕು. ನಗರಗಳಲ್ಲಿ ಚರಂಡಿ ವ್ಯವಸ್ಥೆ ಮಾಡಬೇಕು. ಹೂಳು ತುಂಬಿದ ಕೆರೆಗಳನ್ನು ಸ್ವಚ್ಛಗೊಳಿಸಬೇಕು. ತ್ಯಾಜ್ಯಗಳನ್ನು ತೋಡು, ನದಿಗಳಿಗೆಸೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು.

ಪ್ರಕೃತಿ ವಿಕೋಪ ಸಂಭವಿಸಿದ ಸಂದರ್ಭದಲ್ಲಿ ಗಾಬರಿ, ಒತ್ತಡಗಳಿಗೆ ಸಿಲುಕುವುದನ್ನು ಕಡಿಮೆ ಮಾಡಲು ವಿಕೋಪ ಸಂಭವಿಸುವ ಮುನ್ನ ಅಥವಾ ಸಂಭವಿಸಿದ ಸಂದರ್ಭದಲ್ಲಿ ಕೂಡಲೆ ಕೈಗೊಳ್ಳಬಹುದಾದ ಕ್ರಮಗಳನ್ನು ಹಾಗೂ ಎಲ್ಲಿಗೆ ಹೋಗಬೇಕು? ಗಾಯಗೊಂಡವರನ್ನು ಹೇಗೆ ಸಾಗಿಸಬಹುದು? ಯಾವ ರೀತಿ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದನ್ನು ತಿಳಿಸಿಕೊಡಬೇಕು. ಜಿಲ್ಲೆಯ ಸಂಪೂರ್ಣ ಮಾಹಿತಿ ಡಿಜಿಟಲ್ ಮ್ಯಾಪಿಂಗ್ ಮಾಡಿ ಪ್ರತಿಯೊಂದು ಗ್ರಾಮಪಂಚಾಯತು, ತಾಲೂಕು ಕಛೇರಿ, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತು ಕಛೇರಿಗಳಲ್ಲಿ ಲಭ್ಯವಾಗುವಂತೆ ಮಾಡಬೇಕು. ಪ್ರಾಕೃತಿಕ ವಿಕೋಪ ತಡೆಯುವುದು ಮಾನವನಿಗೆ ಅಸಾಧ್ಯವಾದರೂ ಪೂರ್ವಸಿದ್ಧತೆ ನಡೆಸಿದಲ್ಲಿ ಸಾವು, ನೋವುಗಳನ್ನು ತಪ್ಪಿಸಬಹುದು.

***

# ತರಗತಿ X

# ಕನ್ನಡ - I

## ಘಟಕ 2

## ಬಾಳ ಬೆಳಕು

## ◻ ವಚನಸಿರಿ

**ವಚನಗಳ ಆಶಯ:**

ಭೂಮಿಯಲ್ಲಿ ಒರತೆಗಳನ್ನು ಕಂಡಂತಹ ಕೆಲವರು ಬಾವಿಯನ್ನು ತೋಡಿ ಅರವಟಿಗೆ, ಛತ್ರಗಳನ್ನು ನಿರ್ಮಿಸಿ ಇದೆಲ್ಲವೂ ತಮ್ಮದೆಂದು ಅಧಿಕಾರವನ್ನು ಸ್ಥಾಪಿಸಿ, ಅಹಂಕಾರದಿಂದ ಮೆರೆಯುತ್ತಾರೆ. ಗಿಡಗಳು ಫಸಲನ್ನು ನೀಡದಿದ್ದರೆ, ಸುರಿಯಬೇಕಾದ ಮಳೆ ಸಕಾಲಕ್ಕೆ ಸುರಿಯದಿದ್ದರೆ, ಈ ಮಾನವರು ಹೇಗೆ ತಾನೆ ನೀಡಲು ಸಾಧ್ಯ? ಎಂದು ವಚನಕಾರರು ಪ್ರಶ್ನಿಸಿದ್ದಾರೆ.

ಜ್ಞಾನಿಗಳಾದ ಸಜ್ಜನರ ಸಹವಾಸವನ್ನು ಮಾಡಬೇಕು. ದುರ್ಜನರ ಸಂಗದಿಂದ ದೂರವಿರಬೇಕು. ಹಾವು ಯಾವುದೇ ಆಗಿರಲಿ, ವಿಷವು ಉಂಟುಮಾಡುವ ಪರಿಣಾಮ ಒಂದೇ ಆಗಿರುತ್ತದೆ. ದುರ್ಜನರ ಸಹವಾಸ ಎಂದರೆ ವಿಷಪೂರಿತ ಹಾವಿನ ಸಹವಾಸದಂತೆ ಅಪಾಯಕಾರಿ. ಅಂಥವರ ಸಂಗ ಮಾಡಲೇಬಾರದು. ಅಂತರಂಗ ಶುದ್ಧವಿಲ್ಲದವರ ಗೆಳೆತನವೆಂದರೆ ಸಿಂಗಿಯಂತಹ ಘೋರ ಜಂತುವಿನೊಂದಿನ ಸಹವಾಸದಂತೆ,ಕಾಳಕೂಟದ ವಿಷದಂತೆ ಘೋರ ಪರಿಣಾಮವನ್ನುಂಟುಮಾಡುತ್ತದೆ.

ಈಳೆ, ನಿಂಬೆ, ಮಾವು, ಮಾದಲವೇ ಮುಂತಾದವುಗಳ ಹಣ್ಣುಗಳು ಹುಳಿಯಾಗುವುದಕ್ಕೆ ಆ ಗಿಡಗಳಿಗೆ ಹುಳಿ ನೀರನ್ನು ಯಾರಾದರೂ ಹಾಕುತ್ತಾರೆಯೇ ? ಹಾಗೆಯೇ ಕಬ್ಬು, ಬಾಳೆ, ಹಲಸು, ತೆಂಗು ಮುಂತಾದ ಗಿಡ ಮರಗಳು ಸಿಹಿಯಾದ ಫಲವನ್ನು ನೀಡಲು ಆ ಮರಗಳ ಬುಡಕ್ಕೆ ಸಿಹಿನೀರನ್ನು ಹಾಕಿದವರು ಯಾರು ? ಕಳವೆ, ರಾಜಾನ್ನ, ಶಾಲ್ಯಾನ್ನಗಳಿಗೆ ಪರಿಮಳದ ನೀರನ್ನು ಎರೆದವರು ಯಾರು ? ಮರುಗ, ಮಲ್ಲಿಗೆ, ಪಚ್ಚೆ, ಮುಡಿವಾಳದಂತಹ ಸುಗಂಧಯುಕ್ತ ಗಿಡಗಳಿಗೆ ಸುವಾಸಿತ ದ್ರವ್ಯವನ್ನು ಎರೆದವರು ಯಾರು ?

ಹೀಗೆ ಪ್ರಕೃತಿಯಲ್ಲಿರುವ ನೀರು, ನೆಲ, ಆಕಾಶವು ಬೇರೆ ಬೇರೆ ವಸ್ತುಗಳಲ್ಲಿ ಸೇರಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡರೂ ಪ್ರಕೃತಿಯು ತಾನು ಬೇರೆಯೇ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಅಂತೆಯೇ ಚೆನ್ನಮಲ್ಲಿಕಾರ್ಜುನನು ಬೇರೆ ಬೇರೆ ರೂಪಗಳಲ್ಲಿ, ಹೆಸರುಗಳಲ್ಲಿ ಕಾಣಿಸಿಕೊಂಡರೂ, ತಾನು ಬೇರೆಯೇ ರೀತಿಯಲ್ಲಿ ತನ್ನ ಇರುವಿಕೆಯನ್ನು ಪ್ರಕಟಪಡಿಸುತ್ತಾನೆ.

## ◻ ಮನಃ ಪರಿವರ್ತನೆ

**ಟಿಪ್ಪಣಿ ತಯಾರಿಸಿರಿ :**

ಅಹಿಂಸಾ ಮಾರ್ಗದ ಮೂಲಕ ಬುದ್ಧನು ಅಂಗುಲೀಮಾಲನ ಮನಃಪರಿವರ್ತನೆ ಮಾಡಿದ ಬಗೆಯನ್ನು ಕುರಿತು ತರಗತಿಯಲ್ಲಿ ಚರ್ಚೆ ನಡೆಸುವುದು. ವಿದ್ಯಾರ್ಥಿಗಳು ಹೇಳಿದ ವಿಚಾರಗಳನ್ನು ಪಟ್ಟಿ ಮಾಡುವುದು.

- ಬುದ್ಧನು ಅಂಗುಲೀಮಾಲನನ್ನು ಕರೆದದ್ದು
- ಅಂಗುಲಿಮಾಲನಗೆ ಬುದ್ಧನ ಕರೆಯಿಂದ ಉಂಟಾದ ಹೊಸ ಅನುಭವ
- 
- 

ಇದೇ ರೀತಿ ಅಹಿಂಸಾ ರೀತಿಯಲ್ಲಿ ಹೋರಾಟ ಮಾಡಿದ ವ್ಯಕ್ತಿಗಳ ಕುರಿತು ಅವರ ಹೋರಾಟ ಮತ್ತು ಸಾಧನೆಯ ಕುರಿತು ಪ್ರಶ್ನೆಗಳನ್ನು ಕೇಳುವುದು ವಿದ್ಯಾರ್ಥಿಗಳು ಹೇಳಿದ ಅಂಶಗಳನ್ನೆಲ್ಲವನ್ನೂ ಕರಿಹಲಗೆಯಲ್ಲಿ ಬರೆಯುವುದು. ಈ ವಿಚಾರಗಳೆಲ್ಲವನ್ನೂ ಕ್ರೋಡೀಕರಿಸಿ ಟಿಪ್ಪಣಿ ತಯಾರಿಸಲು ಹೇಳುವುದು.

- **ಟಿಪ್ಪಣಿ ಹೀಗೂ ಇರಬಹುದು :**

ಹಿಂಸೆಯೇ ಮೂರ್ತಿವೆತ್ತ ರೂಪ ಅಂಗುಲೀಮಾಲನದ್ದು. ಆತನ ನಡೆ ನುಡಿ ಆಚಾರ ವಿಚಾರಗಳಲ್ಲಿ ಕ್ರೌರ್ಯವೇ ಅಡಕವಾಗಿತ್ತು. ಅಂಗುಲೀಮಾಲನ ಹೆಸರು ಕೇಳಿದರೆ ಜನರು ಭಯದಿಂದ ನಡುಗುತ್ತಿದ್ದರು. ಇಂತಹ ದುಷ್ಟನಾದ, ಕೊಲ್ಲಲೆಂದೇ ಬದುಕುತ್ತಿರುವ ಅಂಗುಲೀಮಾಲನಲ್ಲಿಗೆ ನಿರಾಯುಧನಾದ ಬುದ್ಧನು ಆಗಮಿಸಿ ತನ್ನ ಪ್ರೀತಿಯ ನೋಟದಿಂದ, ವಾತ್ಸಲ್ಯದ ಮಾತುಗಳಿಂದ ಅಂಗುಲೀಮಾಲನ ಮನಸ್ಸನ್ನು ಗೆಲ್ಲುತ್ತಾನೆ. ಇನ್ನೇನು ಕೊಲ್ಲುತ್ತೇನೆಂದು ಖಡ್ಗ ಹಿರಿದು ನಿಂತ ಅಂಗುಲೀಮಾಲ ಕೈ ಚೆಲ್ಲಿ ಬುದ್ಧನ ಮುಂದೆ ಸಂಪೂರ್ಣ ಶರಣಾಗತನಾಗುತ್ತಾನೆ. ಇದು ಸಾಧ್ಯವಾದದ್ದು 'ಅಹಿಂಸೆಯೇ ಪರಮಧರ್ಮ' ಎಂದು ನಂಬಿದ ಬೋಧಿಸಿದ ಬುದ್ಧನ ಕರುಣೆ ತುಂಬಿದ ಪ್ರೀತಿಯಿಂದ. 'ಹಿಂಸೆ ಹಿಂಸೆಗೇ ಮರಿ ಹಾಕುತ್ತದೆ' ಎಂಬ ಮಾತಿದೆ. ಹಿಂಸೆಯಿಂದ ಎಂದೆಂದಿಗೂ ಹಿಂಸೆಯನ್ನು ಗೆಲ್ಲಲಾಗದು. ಅದು ಇನ್ನೂ ಹೆಚ್ಚಿನ ಹಿಂಸೆಗೆ ಕಾರಣವಾಗುತ್ತದೆ.

ಅಂಗುಲೀಮಾಲನ ಜೊತೆ ಯುದ್ಧ ಮಾಡಿಯೋ, ಹಿಂಸಾಮಾರ್ಗದಿಂದಲೋ ಆತನನ್ನು ಎಂದಿಗೂ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ. ಒಂದು ವೇಳೆ ಗೆದ್ದರೂ ಆತನ ಮನಃಪರಿವರ್ತನೆ ಸಾಧ್ಯವಾಗುತ್ತಿರಲಿಲ್ಲ. ಬುದ್ಧನ ಅಹಿಂಸಾಮಾರ್ಗ ಅಂಗುಲೀಮಾಲನ ವ್ಯಕ್ತಿತ್ವವನ್ನೇ ಸಂಪೂರ್ಣ ಬದಲಾಯಿಸಿ ಆತ ಹೊಸ ಜನ್ಮತಾಳುವಂತೆ ಮಾಡಿತು. ನಮ್ಮ ಇತಿಹಾಸವನ್ನು ಗಮನಿಸಿದಾಗ ಅಹಿಂಸಾತ್ಮಕ ರೀತಿಯಲ್ಲಿ ಹೋರಾಟ ಮಾಡಿದವರು ಸಾಕಷ್ಟು ಮಂದಿ ಕಾಣಸಿಗುತ್ತಾರೆ. ಮಹಾತ್ಮಗಾಂಧೀಜಿಯವರು ಇದಕ್ಕೆ ಉತ್ತಮ ಉದಾಹರಣೆ. ಏಸು, ಜಯಪ್ರಕಾಶ್ ನಾರಾಯಣ, ನೆಲ್ಸನ್ ಮಂಡೇಲಾ, ಆನ್‌ಸೂಕಿ ಮುಂತಾದವರು ಈ ರೀತಿಯ ಹೋರಾಟದ ಮಾದರಿಗಳಾಗಿದ್ದಾರೆ.

## ಕೃಷಿ ಒಂದು ಜೀವನ ಮಾರ್ಗ

**ಟಿಪ್ಪಣಿ ತಯಾರಿಸಿರಿ :**

ರಾಸಾಯನಿಕ ಗೊಬ್ಬರಗಳನ್ನು ಬಳಸಿ ಮಾಡಿದ ಕೃಷಿ, ಕೃಷಿಭೂಮಿಯ ಕುರಿತು, ಜೈವಿಕ ಕೃಷಿಪದ್ಧತಿಗಳ ಕುರಿತು ಮಾಹಿತಿಗಳಿರುವ ವೀಡಿಯೋ ತುಣುಕುಗಳನ್ನು ಪ್ರದರ್ಶಿಸುವುದು ಬಳಿಕ ತರಗತಿಯಲ್ಲಿ ಚರ್ಚೆ ನಡೆಸುವುದು, ವೀಡಿಯೋ ಹಾಗೂ ಪಾಠದ ಆಧಾರದಲ್ಲಿ ಎರಡೂ ಮಾದರಿಯ ಕೃಷಿ ವಿಧಾನಗಳ ಸಾಧಕ ಬಾಧಕಗಳ ಕುರಿತ ಅಂಶಗಳನ್ನು ಪಟ್ಟಿ ಮಾಡುವುದು.

- ಜೈವಿಕ ಕೃಷಿ ಪದ್ಧತಿಯು ಪರಸರ ಸ್ನೇಹಿ
- ರಾಸಾಯನಿಕ ಬಳಕೆಯಿಂದ ಹೆಚ್ಚಿನ ಫಸಲು ಸಿಗುತ್ತದೆ. ಆದರೆ ಭೂಮಿ ಬಂಜರಾಗುತ್ತದೆ.
-
-

ಪಟ್ಟಿ ಮಾಡಿದ ಅಂಶಗಳನ್ನು ಕ್ರೋಡೀಕರಿಸಿ ಟಿಪ್ಪಣಿ ಬರೆಯಲು ಹೇಳುವುದು.

**ಟಿಪ್ಪಣಿ ಹೀಗೂ ಇರಬಹುದು :**

ಆಧುನಿಕ ಕೃಷಿ ಪದ್ಧತಿಗಳು ಕಡಿಮೆ ಸ್ಥಳದಲ್ಲಿ ಹೆಚ್ಚು ಬೆಳೆ ಬೆಳೆಯುವುದನ್ನೇ ಗುರಿಯಾಗಿರಿಸಿಕೊಂಡು ಚಾಲ್ತಿಗೆ ಬಂದವುಗಳು. ಹೆಚ್ಚುತ್ತಿರುವ ಜನಸಂಖ್ಯೆ, ಹೆಚ್ಚಿದ ಬೇಡಿಕೆ ಹಾಗೂ ಹೆಚ್ಚು ಲಾಭವನ್ನು ಮಾತ್ರ ಉದ್ದೇಶವಾಗಿರಿಸಿಕೊಂಡು ವಾಣಿಜ್ಯೀಕರಣಗೊಂಡಿತು ಕೃಷಿ ಕಾಯಕ. ಇದಕ್ಕೆ ಬೆನ್ನೆಲುಬಾಗಿ ನಿಂತದ್ದು ಹಸಿರುಕ್ರಾಂತಿಯ ನೆಪದಲ್ಲಿ ಹುಟ್ಟಿಕೊಂಡ ಒಂದಷ್ಟು ರಾಸಾಯನಿಕ ಗೊಬ್ಬರ, ಕೀಟನಾಶಕಗಳು. ಈ ಮೂಲಕ ಇದನ್ನು ತಯಾರಿಸುವ ಕಾರ್ಖಾನೆಗಳು ಹಣಮಾಡಿಕೊಂಡವು. ಆದರೆ ಇದೆಲ್ಲದರ ದುಷ್ಪರಿಣಾಮವನ್ನು ಅನುಭವಿಸಬೇಕಾಗಿ ಬಂದದ್ದು ಸಹಜವಾಗಿಯೇ ಫಲವತ್ತಾದ ಭೂಮಿ.

ಅಧಿಕ ಬೆಳೆಯ ಆಮಿಷಕ್ಕೆ ಒಳಗಾದ ರೈತರು ನೆಲಕ್ಕೆ ರಾಸಾಯನಿಕಗಳನ್ನು ಸುರಿದಾಗ ಭೂಮಿ ಬಂಜರಾಯಿತು. ಬೆಳೆದ ಬೆಳೆ ವಿಷಯವಾಯಿತು. ವಿಷವನ್ನೇ ಆಹಾರವಾಗಿ ತಿನ್ನುವ ಪರಿಸ್ಥಿತಿ ಬಂದೊದಗಿತು. ಮಾನವನ ಆರೋಗ್ಯ ಹದಗೆಟ್ಟಿತು. ಪ್ರಕೃತಿಯ ಸಮತೋಲನ ನಾಶವಾಯಿತು. ಕೃಷಿಯ ಖರ್ಚು ಹೆಚ್ಚಿ ರೈತ ಸಾಲಗಾರನಾದ.

ಈ ಎಲ್ಲಾ ಕಾರಣಗಳಿಂದಾಗಿ ಜೈವಿಕ ಕೃಷಿ ಪದ್ಧತಿಯ ಬಗ್ಗೆ ಜನರು ಒಲವು ತೋರಲಾರಂಭಿಸಿದರು. ಹಳೆಯ ಮಾದರಿಯ ಸಾವಯವ, ಸಾಂಪ್ರದಾಯಿಕ, ಸಹಜ ಕೃಷಿ ಪದ್ಧತಿಗಳು ಭೂಮಿಯ ಜೈವಿಕ ಸತ್ವವನ್ನು ನಾಶಪಡಿಸದೆ, ಹವಾಮಾನಕ್ಕೆ ಪ್ರಕೃತಿಗೆ ಹೊಂದಿಕೊಂಡಿರುವ ಸಹಜ ಸರಳ ಕೃಷಿ ಪದ್ಧತಿಯಾಗಿದೆ.

ಆಯಾ ಪ್ರದೇಶದ ನೀರಿನ ಲಭ್ಯತೆ, ಮಣ್ಣಿನ ಸತ್ವ, ಹವಾಗುಣಕ್ಕೆ ಹೊಂದಿಕೊಳ್ಳುವ ಬೆಳೆಯನ್ನು ಈ ಪದ್ಧತಿಯಲ್ಲಿ ಬೆಳೆಸಲಾಗುತ್ತದೆ. ಸಾವಯವ ಗೊಬ್ಬರವನ್ನು ಬಳಸಿ, ಕಡಿಮೆ ಖರ್ಚಿನಲ್ಲಿ ಬೆಳೆದ ಬೆಳೆ ನಿಜಾರ್ಥದಲ್ಲಿ ಸತ್ವಪೂರ್ಣ ಆಹಾರವಾಗಿ ಬೆಳೆದ ಮಣ್ಣನ್ನು, ಬೆಳೆದ ರೈತನನ್ನು, ತಿನ್ನುವ ಜನರನ್ನು ಉಳಿಸುತ್ತದೆ, ಬೆಳೆಸುತ್ತದೆ. ಜೊತೆಗೆ ಪ್ರಕೃತಿಯ ಸಮತೋಲನವನ್ನು ಕಾಪಾಡುತ್ತದೆ. ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತದೆ.

ಪರಿಸರ ಸ್ನೇಹಿ ವ್ಯವಸಾಯ ಕ್ರಮವಾದ ಈ ಜೈವಿಕ ಕೃಷಿ ಪದ್ಧತಿಯು ಜೊತೆಗೆ ಪಶುಸಂಗೋಪನೆಗೂ ಅವಕಾಶ ನೀಡುತ್ತದೆ. ಮಣ್ಣಿನ ಗುಣಮಟ್ಟವನ್ನು ಕಾಯ್ದುಕೊಂಡು ಆರೋಗ್ಯಕರ ಇಳುವರಿಯನ್ನು ನೀಡುವ ಈ ಕೃಷಿ ಪದ್ಧತಿಯಲ್ಲಿ ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಪ್ರಸ್ತುತ ಸ್ಪರ್ಧಾತ್ಮಕ ಬೆಲೆಯೂ ಸಿಗುತ್ತಿದೆ. ಒಟ್ಟಂದದಲ್ಲಿ ನಿಸರ್ಗ ಧರ್ಮವನ್ನು ಪಾಲಿಸುವ ಈ ಜೈವಿಕ ಕೃಷಿ ಚಟುವಟಿಕೆಗಳು ಭೂಮಿಯಲ್ಲಿ ಜೀವಿಗಳು ಆರೋಗ್ಯದಿಂದಲೂ, ನೆಮ್ಮದಿಯಿಂದಲೂ ಬಾಳುವುದಕ್ಕೆ ಸಹಾಯಕವಾಗುತ್ತದೆ.

**ಪೂರಕ ಓದಿಗಾಗಿ**

ವಚನ ಸಂಪುಟ ಭಾಗ 1

ವಚನ ಸಂಚಯ ಜಾಲತಾಣ

***

# ತರಗತಿ X

# ಕನ್ನಡ - I

### ಘಟಕ 4

# ಹಳೆಬೇರು – ಹೊಸಚಿಗುರು

## ◻ ಶಬ್ದವೇ ಇಲ್ಲದ ಕವಿತೆ

**ಲಘು ಲೇಖನ ಬರೆಯುವುದು**

"ತಾಯಿ – ಅವಳ ಮಗಳು – ಅವಳ ಮಗು – ಇದೊಂದು ವಾತ್ಸಲ್ಯದ ಕರುಳ ಬಳ್ಳಿಯ ಸರಪಳಿ. ಯಾವ ನಾಗರಿಕತೆಯೂ ಎಂಥ ಯಾಂತ್ರಿಕತೆಯೂ ಇದರ ಚೆಲುವನ್ನು, ಸೂಕ್ಷ್ಮ ಭಾವಸ್ಪಂದನವನ್ನು ಮಸುಳಿಸಲಾರದು' – ಲೇಖಕರ ಈ ಮಾತಿನ ಬಗೆಗೆ ತಮ್ಮ ಅಭಿಪ್ರಾಯವನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಮಂಡಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸೂಚಕಗಳ ಆಧಾರದಲ್ಲಿ ಉತ್ತಮವಾದ ಅಭಿಪ್ರಾಯಗಳನ್ನು ಆಯ್ಕೆ ಮಾಡಲಿ. ಸೂಚಕಗಳನ್ನು ತರಗತಿ ಚರ್ಚೆಯ ಆಧಾರದಲ್ಲಿ ಕಂಡುಕೊಳ್ಳಲಿ. ಸೂಚಕಗಳ ಆಧಾರದಲ್ಲಿ ತಮ್ಮ ರಚನೆಗಳನ್ನು ಉತ್ತಮಪಡಿಸಿಕೊಳ್ಳಲಿ.

**ಸೂಚಕದಲ್ಲಿ ಏನಿರಬೇಕು ?**

- ಲೇಖನದ ಸ್ವರೂಪ – ಶೀರ್ಷಿಕೆ, ಆಕರ್ಷಕ ಆರಂಭ, ಆಶಯದ ಸಂಕ್ಷಿಪ್ತ ವಿವರಣೆ – ಉಪಸಂಹಾರ – ಮುಕ್ತಾಯ
- ಲೇಖಕರ ಮಾತಿನ ಆಶಯವನ್ನು ಸರಳವಾಗಿ, ಸ್ಪಷ್ಟವಾಗಿ, ಚುಟುಕಾಗಿ ಹೇಳಲಾಗಿದೆ.
- ಆಶಯಗಳು ಅನುಕ್ರಮವಾಗಿ ಬಂದಿವೆ
- ಅಭಿಪ್ರಾಯಗಳ ಮಂಡನೆಯಲ್ಲಿ ಸ್ವಂತಿಕೆಯಿದೆ.
- ನಿರೂಪಣೆಯ ಶೈಲಿ, ಭಾಷೆ ಉತ್ತಮವಾಗಿದೆ.

ಲಘು ಲೇಖನ ಹೀಗೂ ಇರಬಹುದಲ್ಲವೇ ?

## ಮಸುಕಾಗದ ಬಾಂಧವ್ಯ

ಆಧುನಿಕ ಜೀವನ, ನಮ್ಮ ಜೀವನಶೈಲಿಯಲ್ಲಿ ಎದ್ದು ಕಾಣುವಂಥ ಬದಲಾವಣೆಗಳನ್ನು ತಂದಿದೆ. ಹಿಂದಿನ ಮತ್ತು ಇಂದಿನ ತಲೆಮಾರುಗಳ ಜನರ ನಂಬಿಕೆ, ಆಚಾರವಿಚಾರ ಮಾತ್ರವಲ್ಲ ಜೀವನ ಮೌಲ್ಯಗಳಲ್ಲೂ ಸಾಕಷ್ಟು ಭಿನ್ನತೆಗಳಿವೆ. ಆದರೆ ಕಾಲನ ತುಳಿತಕ್ಕೆ ಸಿಲುಕಿ ಬದಲಾಗದೆ ಉಳಿಯುವ ಕೆಲವೇ ಕೆಲವು ಭಾವಬಂಧಗಳಲ್ಲಿ ತಾಯಿ ಮಗಳ ಬಾಂಧವ್ಯವೂ ಒಂದು.

ಎಚ್.ಎಸ್.ವಿ. ಯವರ 'ಶಬ್ದವೇ ಇಲ್ಲದ ಕವಿತೆ' ಪಾಠವು ಎರಡು ಕಾಲಘಟ್ಟಗಳ ತಾಯಿ–ಮಗಳ

ಸಂಬಂಧದ ಸುಂದರ ಚಿತ್ರಣಗಳನ್ನು ನೀಡುತ್ತದೆ. ಮೊದಲನೆಯದು ಜನಪದ ಗೀತೆಯೊಂದರಲ್ಲಿ ಬರುವ ಹಳ್ಳಿಯ ಹೆಣ್ಣು ಮಗಳ ಚಿತ್ರಣ. ತವರಿನಲ್ಲಿ ತನ್ನ ಚೊಚ್ಚಲ ಬಾಣಂತನವನ್ನು ಮುಗಿಸಿಕೊಂಡ ಅವಳು ತವರಿನಿಂದ ನೀಡಲಾದ ಸೀರೆಯನ್ನು ಉಟ್ಟುಕೊಂಡು ತಲೆಯ ಮೇಲೆ ತೊಟ್ಟಿಲನ್ನು ಹೊತ್ತುಕೊಂಡು, ಮಗುವಿನ ಹಾಲಿಗಾಗಿ ಅಪ್ಪ ಕೊಟ್ಟ ಎಮ್ಮೆಯನ್ನೂ ಹೊಡಕೊಂಡು ಕಾಲ್ನಡಿಗೆಯಲ್ಲಿ ಗಂಡನ ಮನೆಗೆ ಹೊರಟಿದ್ದಾಳೆ. ತವರನ್ನೂ ತವರಿನವರನ್ನೂ ಬಿಟ್ಟು ಮುಂದೆ ಸಾಗಿದ ಅವಳು ಇನ್ನೇನು ಈ ಗುಡ್ಡ ಇಳಿಯ ಹೊರಟರೆ ತನ್ನ ತವರು ಕಣ್ಮರೆಯಾಗುತ್ತದೆ ಅನ್ನಿಸಿದಾಗ ಆ ಗುಡ್ಡದ ತುದಿಯಲ್ಲಿ ನಿಂತು ತಿರುಗಿನೋಡಿ ತನ್ನ ತವರನ್ನು, ತವರಿನವರನ್ನು ಕಣ್ತುಂಬಿಕೊಂಡು ಗಂಡನ ಮನೆಯ ಹಾದಿ ಹಿಡಿಯುತ್ತಾಳೆ.

ಎರಡನೇ ಚಿತ್ರಣ ನಗರದ ಹೆಣ್ಣು ಮಗಳದು. ಇಲ್ಲಿ ಅವಳ ಪಯಣ ರೈಲಿನಲ್ಲಿ. ಇಲ್ಲಿಯೂ ಬಾಣಂತನವನ್ನು ತವರಿನಲ್ಲಿ ಮುಗಿಸಿ ಮಗುವಿನೊಂದಿಗೆ ಗಂಡನ ಮನೆಗೆ ಹೊರಟಿರುವ ಮಗಳು ಮತ್ತು ತಾಯಿಯ ಚಿತ್ರಣ ಬಹಳ ಮಾರ್ಮಿಕವಾಗಿ ಮೂಡಿ ಬಂದಿದೆ. ರೈಲು ಹೋಗುವಲ್ಲಿಯ ತನಕದ ತಾಯಿ–ಮಗಳ ಸಂಭಾಷಣೆ, ತಾಯಿಯ ಕಾಳಜಿ, ಆತಂಕ ಮನತಟ್ಟುತ್ತದೆ.

ಒಂದು ಜಾನಪದ ಲೋಕದ ಹಳ್ಳಿಯ ಚಿತ್ರಣವಾದರೆ, ಮತ್ತೊಂದು ಆಧುನಿಕತೆಯ ನಗರದ ಚಿತ್ರಣ. ಆದರೆ ಎರಡರಲ್ಲೂ ತಾಯಿ–ಮಗಳ ಅಗಲುವಿಕೆಯ ನೋವು, ಚಡಪಡಿಕೆ ಸಮಾನವಾದುದು ಎಂಬುದು ನಮಗೆ ಮನವರಿಕೆಯಾಗುತ್ತದೆ. ಕಾಲದ ಬದಲಾವಣೆ ಇಲ್ಲಿ ಯಾವುದೇ ಪರಿಣಾಮವನ್ನು ಬೀರಿಲ್ಲ ಎಂಬುದು ತಾಯಿ–ಮಗಳ ಕರುಳ ಬಳ್ಳಿಯ ಸಂಬಂಧವನ್ನು ಯಾವುದರಿಂದಲೂ ಅಳಿಸಲು ಸಾಧ್ಯವಿಲ್ಲ ಎಂಬುದನ್ನು ಸಾರಿ ಹೇಳುತ್ತದೆ.

- **ಟಿಪ್ಪಣಿ ಬರೆಯುವುದು**

- ಪುಸ್ತಕದಲ್ಲಿ ನೀಡಿರುವ ಜನಪದ ಗೀತೆಗಳ ಸಾಲುಗಳನ್ನು ಒಂದಿಬ್ಬರು ವಿದ್ಯಾರ್ಥಿಗಳು ರಾಗವಾಗಿ ಹಾಡಲಿ.
- **ICT** ಯ ಮೂಲಕ ಹಾಡಿನ ಸಾಲುಗಳನ್ನು ವಿದ್ಯಾರ್ಥಿಗಳಿಗೆ ಕೇಳಿಸುವುದು.
- ಸಾಲುಗಳನ್ನು ಮೌನವಾಗಿ ಓದಿ ಅರ್ಥೈಸಿ, ಗುಂಪಿನಲ್ಲಿ ಚರ್ಚಿಸಿ ಆಶಯ ಬರೆಯಲಿ.
- ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಮಂಡಿಸುವ ಸಂದರ್ಭದಲ್ಲಿ ಉಳಿದವರು ತಮ್ಮ ಬರಹವನ್ನು ಉತ್ತಮಪಡಿಸಿಕೊಳ್ಳಲಿ.
- ಟಿಪ್ಪಣಿಯ ಸೂಚಕಗಳನ್ನು ತರಗತಿ ಚರ್ಚೆಯ ಆಧಾರದಲ್ಲಿ ಕಂಡುಕೊಳ್ಳಲಿ.
- ಸೂಚಕಗಳ ಆಧಾರದಲ್ಲಿ ತಮ್ಮ ರಚನೆಗಳನ್ನು ಉತ್ತಮಪಡಿಸಿಕೊಳ್ಳಲಿ.

- **ಸೂಚಕಗಳಲ್ಲಿ ಏನಿರಬೇಕು ?**

- ಕೊಟ್ಟಿರುವ ಸಾಲುಗಳ ಆಶಯವನ್ನು ಸರಳವಾಗಿ ಅರ್ಥಪೂರ್ಣವಾಗಿ ಹೇಳಲಾಗಿದೆ.
- ಆಶಯಗಳು ಅನುಕ್ರಮವಾಗಿವೆ

- ಅಭಿಪ್ರಾಯ ಮಂಡನೆಯಲ್ಲಿ ಸ್ವಂತಿಕೆಯಿದೆ.
- ನಿರೂಪಣೆಯ ಶೈಲಿ, ಭಾಷೆ ಉತ್ತಮವಾಗಿದೆ.

**ಟಿಪ್ಪಣಿ ಹೀಗೂ ಇರಬಹುದಲ್ಲವೇ?**

ತವರೂರಿನಿಂದ ದೂರವಾದ ಹೆಣ್ಣು ಮಗಳು ಎಷ್ಟೋ ಕಾಲದ ಬಳಿಕ ತಾಯಿಯಿಲ್ಲದ ತವರಿಗೆ ತಿರುಗಿ ಬಂದಾಗ ಅವಳಿಗುಂಟಾದ ಭಾವತೀವ್ರತೆಯನ್ನು 'ತವರೂರ ಮನೆ ನೋಡ ಬಂದೆ' ಜನಪದ ಗೀತೆಯ ಸಾಲುಗಳು ವ್ಯಕ್ತಪಡಿಸುತ್ತವೆ. ಆ ಹೆಣ್ಣು ಮಗಳನ್ನು ಆಕೆ ಚಿಕ್ಕದಿರುವಾಗ ಅವಳ ಹೆತ್ತವರು ಮುತ್ತಿನಂತೆ ಜೋಪಾನವಾಗಿ ಪ್ರೀತಿಯಿಂದ ಬೆಳೆಸಿದ್ದಾರೆ. ಬಳಿಕ ಆಕೆ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದಾಳೆ. ಗಂಡನ ಮನೆ ಸೇರಿದ ಅವಳು ಹತ್ತು ಹದಿನಾರು ವರ್ಷಗಳ ಬಳಿಕ ತವರೂರ ಮನೆಯನ್ನು ನೋಡಲು ಬರುತ್ತಾಳೆ. ಈಗ ಅಲ್ಲಿನ ಚಿತ್ರಣವೇ ಬದಲಾಗಿದೆ. ಪ್ರೀತಿಯಿಂದ ನೋಡಿಕೊಂಡಿದ್ದ ತಾಯಿ ಈಗ ಇಲ್ಲ. ಅವಳ ನೆನಪು ಮಗಳ ಕಣ್ಣಿನಲ್ಲಿ ಅಯಾಚಿತವಾಗಿ ಕಣ್ಣೀರು ಬರುವಂತೆ ಮಾಡುತ್ತದೆ. ತಾಯಿಯಿಲ್ಲ ಎನ್ನುವುದು ಮಾತ್ರವಲ್ಲ, ಹಿಂದೆ ಆಕೆಗೆ ಸಿಗುತ್ತಿದ್ದ ಪ್ರೀತಿ, ಕಾಳಜಿಗಳ ಸುಳಿವೂ ಈಗ ಆ ಮನೆಯಲ್ಲಿ ಇಲ್ಲ, 'ಹೆತ್ತ ತಾಯಿ ತಂದೆ ಪ್ರೀತಿಯಿಂದ ಮುತ್ತಿನಂತೆ ಜೋಪಾನವಾಗಿ ಬೆಳೆದೆ. ಅದು ಎತ್ತ ಹೋದರೂ ಕಾಣದಾಗಿದೆ...' ಎಂಬ ಸಾಲುಗಳು ತವರು ಮನೆಯಿಂದ ಮಾತ್ರವಲ್ಲ ತವರಿನವರ ಮನಸಿನಿಂದಲೂ ದೂರವಾದೆ ಎಂಬ ಹೆಣ್ಣು ಮಗಳ ನೋವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ.

ತಾಯಿ ಮತ್ತು ತವರಿನ ಬಗೆಗೆ ಹೆಣ್ಣು ಮಕ್ಕಳಿಗೆ ಸರಿಸಾಟಿಯಿಲ್ಲದ ಪ್ರೀತಿ, ವ್ಯಾಮೋಹ. ತವರಿನಿಂದ ಸಿಗುವ ಪ್ರೀತಿಗೆ ಅವಳೆಂದೂ ಬೆಲೆ ಕಟ್ಟಲಾರಳು. ಹೆಣ್ಣು ಮಗಳಿಗಿರುವ ಆ ಪ್ರೀತಿಯನ್ನು ಅರ್ಥೈಸಬಲ್ಲವಳು ತಾಯಿ ಮಾತ್ರ. ತಾಯಿಯಿಲ್ಲದ ತವರಿನಲ್ಲಿ ಆ ಸೂಕ್ಷ್ಮ ಭಾವಸ್ಪಂದನ ನಷ್ಟವಾಗುತ್ತದೆ ಎನ್ನುವ ಸೂಕ್ಷ್ಮಚಿತ್ರಣ ಈ ಸಾಲುಗಳಲ್ಲಿವೆ.

**ಮುಳ್ಳಿಡಿದ ಮರನೇರಿದಂತಾದುದು**

**ಪದವಿಂಗಡಣೆ :**

ತಿಳಿದನಖಿಳ – ತಿಳಿದನು + ಅಖಿಳ

ವಧುವಾದಳಾತಂಗೆ – ವಧು + ಆದಳು + ಆತಂಗೆ

ಜಪಾನುಷ್ಠಾನ – ಜಪ + ಅನುಷ್ಠಾನ

ಪೂಜೆಗಳಿಗಾಲಸ್ಯಮಂ – ಪೂಜೆಗಳಿಗೆ + ಆಲಸ್ಯಮಂ

ಪರಿಚರ್ಯೆಗನುಕೂಲೆಯಾಗಿರ್ದು – ಪರಿಚರ್ಯೆಗೆ + ಅನುಕೂಲೆ + ಆಗಿರ್ದು

ನೀನೆಂದೊಡಿಂತೆಂದಳು – ನೀನು + ಎಂದೊಡೆ + ಇಂತು + ಎಂದಳು

ಕೇಳ್ವಳೆಂದೆಣಿಕೆಗೊಳ್ಳದಿರ್ – ಕೇಳ್ವಳ್ + ಎಂದು + ಎಣಿಕೆಗೊಳ್ಳದಿರ್

ಮರನೇರಿದಂತಾದುದಿಹಪರಕಿದೊಳ್ಳಿತಾದಪುದೆ

– ಮರನ + ಏರಿದಂತೆ + ಆದುದು + ಇಹಪರಕೆ + ಇದು + ಒಳ್ಳಿತು + ಆದಪುದೆ

ತಪೋಹಾನಿಯೆಂದಳ್ಳೆಯೊಳ್ – ತಪೋಹಾನಿ + ಎಂದು + ಅಳ್ಳೆಯೊಳ್

ಇಂತಿರುತಿರಲ್ಕೆ – ಇಂತು + ಇರುತ + ಇರಲ್ಕೆ

ಕೌಂಡಿನ್ಯನೆಂಬೊರ್ವ – ಕೌಂಡಿನ್ಯನ್ + ಎಂಬ + ಒರ್ವ

ಚಿಂತೆವೆತ್ತಿರಲವನಿದೇನೆಂದು – ಚಿಂತೆ + ಪೆತ್ತಿರಲ್ + ಅವನ್ + ಇದು + ಏನೆಂದು

ಬೆಸಗೊಂಡೊಡವಳ – ಬೆಸಗೊಂಡೊಡೆ + ಅವಳ

ಪೇಳ್ದೊಡವನಿದಕೆ – ಪೇಳ್ದೊಡೆ + ಅವನು + ಇದಕೆ

ಮಾಡಲಾದಪುದೆಂದು – ಮಾಡಲು + ಆದಪುದು + ಎಂದು

ಯಾತ್ರೆಗೈದಿದನಿತ್ತಲು – ಯಾತ್ರೆಗೆ + ಐದಿದನು + ಇತ್ತಲು

ಕದ್ದುತಹೆನಧಮ – ಕದ್ದುತಹೆನು + ಅಧಮ

ಪೇಳ್ದುಬಹೆನಪಾತ್ರಂಗೆಂದೊಡಿಂತೆಂದಳು – ಪೇಳ್ದುಬಹೆನ್ + ಅಪಾತ್ರಂಗೆ + ಎಂದೊಡೆ + ಇಂತು + ಎಂದಳು

ಪೈತೃಕವನುತ್ತಮದ – ಪೈತೃಕವನ್ + ಉತ್ತಮದ

ಬಹೆನಾಲಯವನತಿಶುದ್ಧವಾದ – ಬಹೆನ್ + ಆಲಯವನು + ಅತಿಶುದ್ಧವಾದ

ಕೂಡೆನಳ್ತಿಯಿಂದ – ಕೂಡೆನ್ + ಅಳ್ತಿಯಿಂದ

ಸತ್ಪಾತ್ರದವನಿಯಮರರ್ಗೆನಲ್ – ಸತ್ + ಪಾತ್ರದ + ಅವನಿಯ + ಅಮರರ್ಗೆ + ಎನಲ್

ಚಂಡಿಗವನಿಂತೆಂದನು – ಚಂಡಿಗೆ + ಅವನ್ + ಇಂತು + ಎಂದನು

ಬಿಡುವೆನರ್ಚನೆಯೊಳಾದರಿಸೆನಾಂ – ಬಿಡುವೆನ್ + ಅರ್ಚನೆಯೊಳ್ + ಆದರಿಸೆನ್ + ಆಂ

ಪೂಜೆಗೈಸದಿರೆನಿಂದೊಲ್ಲೆನೆಂದೊಕ್ಕಣಿಸಿದಿನಿತನೆಲ್ಲಮಂ

– ಪೂಜೆಗೈಸದಿರೆನ್ + ಇಂದು + ಒಲ್ಲೆನ್ + ಎಂದು + ಒಕ್ಕಣಿಸಿದ + ಇನಿತನ್ + ಎಲ್ಲಮಂ

ನಲವಿಂದೊದವಿಸಿದಳಖಿಳ – ನಲವಿಂದ + ಒದವಿಸಿದಳ್ + ಅಖಿಳ

ಕಂಡನೀತೆರನನುದ್ದಾಲಕಂ – ಕಂಡನ್ + ಈ ತೆರನನ್ + ಉದ್ದಾಲಕಂ

ಹಾಯ್ಕೆಂದೊಡುದ್ದಂಡದಿಂದೆತ್ತಿ – ಹಾಯ್ಕು + ಎಂದೊಡೆ + ಉದ್ದಂಡದಿಂದ + ಎತ್ತಿ

ನಿನ್ನೊಳಧ್ವರಹಯಮಂ – ನಿನ್ನೊಳ್ + ಅಧ್ವರಹಯಮಂ

ಸಂನ್ಯಾಸಕವನತ್ತಲವನಿಯೊಳ್ – ಸಂನ್ಯಾಸಕೆ + ಅವನ್ + ಅತ್ತಲ್ + ಅವನಿಯೊಳ್

**ಟಿಪ್ಪಣಿ ಬರೆಯುವುದು**

– ಉದ್ಧಾಲಕ ಮತ್ತು ಚಂಡಿಯ ಕೌಟುಂಬಿಕ ಬದುಕು ಸಂತೋಷ, ಸಮಾಧಾನದಿಂದ ಕೂಡಿತ್ತೇ? ಅವರ ಬದುಕು ಹಾಗಾಗಲು ಕಾರಣಗಳೇನು? ಎಂಬ ವಿಷಯದ ಬಗ್ಗೆ ತರಗತಿ ಚರ್ಚೆ ನಡೆಸುವುದು. ಚರ್ಚೆಯಲ್ಲಿ ಮೂಡಿಬಂದ ಕಾರಣಗಳನ್ನು ಕರಿಹಲಗೆಯಲ್ಲಿ ದಾಖಲಿಸುವುದು. ಕೌಟುಂಬಿಕ ಸಾಮರಸ್ಯವನ್ನು ಹಾಳುಗೆಡಹಲು ಕಾರಣವಾಗುವಂತಹ ಅಂಶಗಳನ್ನು ಕಾವ್ಯಭಾಗದ ಆಧಾರದಲ್ಲಿ ವಿದ್ಯಾರ್ಥಿಗಳು ಗುಂಪಿನಲ್ಲಿ ಬರೆಯಲಿ. ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಬಳಿಕ ಅಗತ್ಯವಿದ್ದರೆ ವೈಯಕ್ತಿಕವಾಗಿ ಉತ್ತಮಪಡಿಸಿ ಬರೆಯಲಿ.

**ಟಿಪ್ಪಣಿಯನ್ನು ಹೀಗೂ ಬರೆಯಬಹುದಲ್ಲವೇ?**

**ಕೌಟುಂಬಿಕ ಸಾಮರಸ್ಯವನ್ನು ಹಾಳುಗೆಡಹಲು ಕಾರಣವಾಗುವ ಅಂಶಗಳು**

ಭಾರತೀಯ ಸಂಸ್ಕೃತಿಯ ಜೀವಾಳವೇ ಇಲ್ಲಿನ ಕುಟುಂಬ ಪದ್ಧತಿಯಲ್ಲಿದೆ ಎನ್ನಬಹುದು. ಪರಸ್ಪರ ಪ್ರೀತಿ, ನಂಬಿಕೆ, ವಿಶ್ವಾಸಗಳ ತಳಹದಿಯ ಮೇಲೆ ಈ ಸಂಸ್ಕೃತಿ ನೆಲೆನಿಂತಿದೆ.

ಕುಟುಂಬದಲ್ಲಿ ಹೊಂದಾಣಿಕೆಯಿಲ್ಲದಿದ್ದರೆ ಆಗುವ ಅನಾಹುತವನ್ನು'ಮುಳ್ಳಿಡಿದ ಮರನೇರಿದಂತಾದುದು' ಕಾವ್ಯಭಾಗವು ಚೆನ್ನಾಗಿ ಚಿತ್ರಿಸುತ್ತದೆ. ಉದ್ಧಾಲಕನೆಂಬ ಮುನಿಗೆ ಮಡದಿಯಾಗಿ ಬಂದ ಚಂಡಿ 'ಎಳ್ಳನಿತು ನಿನ್ನ ಮಾತಂ ಕೇಳ್ವಳ್ ಎಂದು ಎಣಿಕೆಗೊಳ್ಳದಿರ್, ಪರಿಚರ್ಯೆ ಮನೆವಾರ್ತೆ ಎಂದೆಂಬ ತಳ್ಳಿಯವಳಲ್ಲ, ನೀನೆಂದುದಂ ಮಾಡೆನ್' ಎಂದು ಮೊದಲಿಗೇ ಅಸಹಕಾರವನ್ನು ಘೋಷಿಸುತ್ತಾಳೆ. ವೈವಾಹಿಕ ಜೀವನವನ್ನು ಸರಿಹೊಂದಿಸಿ ಮುಂದೆ ಕೊಂಡು ಹೋಗಲು ಉದ್ಧಾಲಕ ತುಂಬ ಪ್ರಯತ್ನಿಸುತ್ತಾನೆ. ಆದರೂ ಚಂಡಿಯ ಉದ್ಧಟತನದಿಂದ ಅವನ ಪ್ರಯತ್ನ ವಿಫಲವಾಗುತ್ತದೆ.

ಚಂಡಿಯ ಸ್ವಭಾವವನ್ನು ತಿಳಿದ ಉದ್ಧಾಲಕ ಅವಳನ್ನು ತಿದ್ದುವುದು ಅಥವಾ ಹೊಂದಿಕೊಳ್ಳುವುದನ್ನು ಬಿಟ್ಟು ಅವಳಿಗೆ ವಿರುದ್ಧವಾದುದನ್ನು ನುಡಿದು ಅವಳಿಂದ ಕೆಲಸಗಳನ್ನು ಮಾಡಿಸಿ ಸಂತೋಷ, ಸಮಾಧಾನ ಪಡೆದುಕೊಳ್ಳಲು ಪ್ರಯತ್ನಿಸುತ್ತಾನೆ. ಒಂದು ರೀತಿಯಲ್ಲಿ ನೋಡುವುದಾದರೆ ಅವನ ಬದುಕೇ ನಟನೆಯಾಗುತ್ತದೆ. ಅವನ ಆ ಕೃತ್ರಿಮ ಜೀವನಶೈಲಿ ಚಂಡಿಯನ್ನು ಕಲ್ಲಾಗಿಸುವ ದುರಂತದತ್ತ ಕೊಂಡೊಯ್ಯಿತು.

ಸಂಸಾರದಲ್ಲಿ ಸಾಮರಸ್ಯ ಅತಿ ಅಗತ್ಯ ಎನ್ನುವುದನ್ನು ಈ ಕಾವ್ಯಭಾಗದಿಂದ ನಾವು ಮನದಟ್ಟು ಮಾಡಿಕೊಳ್ಳಬಹುದು. ಒಂದು ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಇತರರನ್ನು ಅರಿತು, ಶಾಂತಿ, ಸಮಾಧಾನ, ಸಹನೆ, ಹೊಂದಾಣಿಕೆಯ ಗುಣಗಳನ್ನು ಬೆಳೆಸಿಕೊಂಡರೆ ಮಾತ್ರವೇ ಕೌಟುಂಬಿಕ ಸಾಮರಸ್ಯ ಉಳಿಯಲು ಸಾಧ್ಯವಿದೆ.

ಕೃತ್ರಿಮ ಜೀವನಶೈಲಿ, ಉದ್ಧಟತನ, ಅಸಹಕಾರ, ವಂಚನೆ, ವಿಷಯಗಳನ್ನು ಮರೆಮಾಚುವುದು ಇತ್ಯಾದಿ ಕಾರ್ಯಗಳು ಕೌಟುಂಬಿಕ ಜೀವನವನ್ನು ಹಾಳುಗೆಡಹುತ್ತವೆ ಎನ್ನುವುದನ್ನು ಈ ಪಾಠವು ಸಮರ್ಥಿಸುತ್ತದೆ.

## ಕಾಲಪುರುಷನ ಲೀಲೆ

**ಟಿಪ್ಪಣಿ ಬರೆಯಿರಿ**

ಯಕ್ಷಗಾನ ಕಲೆಯು ಕನ್ನಡ ಭಾಷೆಯ ಬೆಳವಣಿಗೆಗೆ ಏನೇನು ಕೊಡುಗೆಗಳನ್ನು ಕೊಟ್ಟಿವೆ ಎನ್ನುವುದರ ಕುರಿತು ತರಗತಿ ಚರ್ಚೆ ನಡೆಸುವುದು. ಚರ್ಚೆ ನಡೆಸಲು ಈ ಕೆಳಗಿನ ಪ್ರಶ್ನೆಗಳನ್ನು ವಿದ್ಯಾರ್ಥಿಗಳಲ್ಲಿ ಕೇಳುವುದು.

- ಯಕ್ಷಗಾನ ಮುಖ್ಯವಾಗಿ ಯಾವ ಭಾಷೆಯ ಕಲೆ?
- ಯಕ್ಷಗಾನ/ತಾಳಮದ್ದಳೆಗಳಲ್ಲಿ ಬಳಕೆಯಾಗುವ ಭಾಷೆಯನ್ನು ಗಮನಿಸಿರುವಿರಾ? ಅದರ ವಿಶೇಷತೆಗಳೇನು?

ಇತ್ಯಾದಿ

ಚರ್ಚೆಯಲ್ಲಿ ಬಂದ ಮುಖ್ಯಾಂಶಗಳನ್ನು ಕರಿಹಲಗೆಯಲ್ಲಿ ದಾಖಲಿಸುವುದು. ಬಳಿಕ ಕ್ರೋಡೀಕರಿಸಿ ವೈಯಕ್ತಿಕವಾಗಿ ಟಿಪ್ಪಣಿ ಬರೆದು ಮಂಡಿಸುವಂತೆ ತಿಳಿಸುವುದು.

**ಟಿಪ್ಪಣಿ ಹೀಗೂ ಇರಬಹುದಲ್ಲವೇ?**

**ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಯಕ್ಷಗಾನ ಕಲೆಯ ಪಾತ್ರ**

ಕನ್ನಡ ಭಾಷಾ ಬೆಳವಣಿಗೆಗೆ ಯಕ್ಷಗಾನ ಕಲೆಯು ಅನನ್ಯವಾದ ಕೊಡುಗೆಗಳನ್ನಿತ್ತಿದೆ ಎನ್ನುವುದು ನಿಸ್ಸಂದೇಹ. ಕನ್ನಡದಲ್ಲಿ ಯಕ್ಷಗಾನ ಪ್ರಸಂಗ ಸಾಹಿತ್ಯ ಎನ್ನುವುದು ಸಾಹಿತ್ಯದ ಒಂದು ಪ್ರಕಾರವಾಗಿಯೇ ಬೆಳೆದು ಬಂದಿದೆ. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ನಡುಗನ್ನಡ ಸಾಹಿತ್ಯವನ್ನು ಜನಸಾಮಾನ್ಯರ ಬಳಿಗೆ ತಲುಪಿಸುವಲ್ಲಿ ಯಕ್ಷಗಾನ ಪ್ರಸಂಗಗಳು ಬಹುಮುಖ್ಯ ಪಾತ್ರವಹಿಸಿವೆ. ಭಾಮಿನಿ, ವಾರ್ಧಕ ಮೊದಲಾದ ಛಂದೋರೂಪಗಳ ಸೊಬಗು, ತಾಳ ಲಯಗಳನ್ನು ಸಾಮಾನ್ಯನೊಬ್ಬ ಆಸ್ವಾದಿಸುತ್ತಾನೆಂದರೆ ಅದು ಯಕ್ಷಗಾನದ ಮುಖಾಂತರವೇ ಆಗಿರಬಹುದು.

ಯಕ್ಷಗಾನದ ಅರ್ಥಗಾರಿಕೆ ಕನ್ನಡ ಭಾಷಾ ಬೆಳವಣಿಗೆಗೆ ನೀಡಿದ, ನೀಡುತ್ತಿರುವ ಕೊಡುಗೆಯನ್ನು ನಿರ್ಲಕ್ಷಿಸುವಂತಿಲ್ಲ. ಅನ್ಯದೇಶೀಯ ಅಥವಾ ಅನ್ಯಭಾಷಾ ಪದಪ್ರಯೋಗಗಳನ್ನು ಯಕ್ಷಗಾನ ಅರ್ಥಗಾರಿಕೆಯಲ್ಲಿ ಕಾಣಲು ಸಾಧ್ಯವಿಲ್ಲ. ಭಾಷಾಶುದ್ಧತೆಯ ಬಗ್ಗೆ ಕಲಾವಿದರು ಅತೀವ ಕಾಳಜಿ ವಹಿಸುತ್ತಾರೆ. ಜನಸಾಮಾನ್ಯರ ಬಳಿಗೆ ತಲುಪುವ ಸಮರ್ಥ ಮಾಧ್ಯಮ ಎಂಬ ನಿಟ್ಟಿನಲ್ಲಿ ಯಕ್ಷಗಾನ ಜನರ ಮೇಲೆ ಬಹಳ ಪ್ರಭಾವ ಬೀರುತ್ತದೆ (ಮತ್ತು ಅವರ ಭಾಷಾ ಮಟ್ಟದಲ್ಲಿ ಗಮನಾರ್ಹ ಸುಧಾರಣೆಯನ್ನು ತರುತ್ತದೆ.) ಯಕ್ಷಗಾನವನ್ನು ವೀಕ್ಷಿಸುವ, ಪ್ರೀತಿಸುವ ವ್ಯಕ್ತಿಗೆ ಅದರ ಹಾಡುಗಳು ಮಾತುಗಳು ಮನಃಪಾಠವಾಗುತ್ತವೆ. ಅನಕ್ಷರಸ್ಥ ಅಥವಾ ಭಾಷೆಯನ್ನು ಆಳವಾಗಿ ಅಧ್ಯಯನ ಮಾಡಿರದ ಸಾಮಾನ್ಯ ವ್ಯಕ್ತಿಯೂ ಶುದ್ಧ ಕನ್ನಡ ಬಳಸುತ್ತಾನೆಂದರೆ ಅದಕ್ಕೆ ಯಕ್ಷಗಾನವೇ ಕಾರಣ ಎಂದು ನಿಸ್ಸಂದೇಹವಾಗಿ ಹೇಳಬಹುದು.

## ಕನ್ನಡ I

## ಘಟಕ – 5

## ಕರುಣೆಯ ಬೆಳಕು

# ಗದ್ಯಾನುವಾದ

ಮಾಣಿಕ್ಯ ರತ್ನದ ಕಾಂತಿ ಸಮೂಹದಿಂದ ವಿರಾಜಮಾನವಾದ ಸಭಾಮಂಟಪದಲ್ಲಿ ದುರ್ಯೋಧನನು ಒಡ್ಡೋಲಗದಲ್ಲಿದ್ದನು. ಆ ಸಭಾಮಂಟಪದಲ್ಲಿ ದುರ್ಯೋಧನನ ನೂರು ಮಂದಿ ತಮ್ಮಂದಿರು ಹಿಂದುಗಡೆ ಇದ್ದರು. ಲಕ್ಕಣನೇ ಮೊದಲಾದ ನೂರು ಮಂದಿ ಮಕ್ಕಳು ಮುಂಭಾಗವನ್ನು ಅಲಂಕರಿಸಿದ್ದರು. ಯುವರಾಜನೂ ಪ್ರೀತಿಯ ತಮ್ಮನೂ ಆದ ದುಶ್ಶಾಸನ ಹಾಗೂ ಅಂಗರಾಜನೂ ಪ್ರೀತಿಯ ಗೆಳೆಯನೂ ಆದ ಕರ್ಣನು ಆತನ ಅಕ್ಕಪಕ್ಕಗಳಲ್ಲಿ ತೊಡೆ ಸೋಂಕುವಂತೆ ಕುಳಿತಿದ್ದರು.

ಹೀಗೆ ಹಿರಿದಾದ ಓಲಗದಲ್ಲಿದ್ದಾಗ ದುರ್ಯೋಧನನಿಗೆ ಮೂರನೆಯ ಬಾಗಿಲಲ್ಲಿ ಬಂದಿದ್ದ ಶ್ರೀಕೃಷ್ಣನ ಆಗಮನವನ್ನು ದ್ವಾರಪಾಲಕನು ತಿಳಿಸಲು ಆತನು ಭೀಷ್ಮರ ಮುಖವನ್ನು ನೋಡಿ ಲೋಕಕ್ಕೆ ಗುರುವಾದ, ಶಂಖ ಚಕ್ರ ಗದಾಪಾಣಿಯೂ ಅತಿಶಯವಾದ ನಾಲ್ಕು ತೋಳುಗಳುಳ್ಳವನೂ ಆದ ಶ್ರೀಕೃಷ್ಣನು ಯಾವುದೋ ಗಹನವಾದ ಚಿಂತೆಯಿಂದ ನನ್ನ ಬಳಿಗೆ ಬಂದನೆಂದರೆ ಈ ಜಗತ್ತಿನಲ್ಲಿ ನನಗೆ ಸರಿಸಮಾನವಾದ ಹಿರಿಮೆಯುಳ್ಳವರು ಬೇರೆ ಯಾರಾದರೂ ಇದ್ದಾರೆಯೇ? ಎಂದನು.

ಅನಂತರ ತನ್ನ ಆಜ್ಞೆಯನ್ನು ನಿರೀಕ್ಷಿಸಿ ಕೈ ಮುಗಿದು ನಿಂತಿದ್ದ ದ್ವಾರಪಾಲಕನ ಮುಖವನ್ನು ನೋಡಿ ದುರ್ಯೋಧನನು 'ಬರಹೇಳು' ಎನ್ನಲು ಅಂಜನ ಪರ್ವತದಂತೆ ಕಣ್ಣಿಗೆ ಮನೋಹರವಾಗುವಂತೆ ಶೋಭಿಸುತ್ತ ಬರುವ ಶ್ರೀಕೃಷ್ಣನನ್ನು ಮೆಲ್ಲನೆ ನೋಡಿ, ಆಯಾಸಗೊಂಡವನಂತೆ ಸಿಂಹಾಸನದಿಂದ ಹೇಗೋ ಎದ್ದು ನಿಂತು ಶ್ರೀಕೃಷ್ಣನನ್ನು ಆಲಂಗಿಸಿ, ನಮಸ್ಕರಿಸಿ ಎತ್ತರವಾದ ಆಸನದಲ್ಲಿ ಕುಳಿತುಕೊಳ್ಳಲು ಹೇಳಿ ಅರ್ಘ್ಯವನ್ನು ಕೊಟ್ಟು ಅನಂತರ ತಾನು ಕುಳಿತುಕೊಂಡನು. ಬಳಿಕ ಮಧುಕೈಟಭರೆಂಬ ರಾಕ್ಷಸರ ವೈರಿಯಾದ ಶ್ರೀಕೃಷ್ಣನ ಮುಖವನ್ನು ನೋಡಿ

ಕೃಷ್ಣಾ, ನೀನೇ ನನ್ನಲ್ಲಿಗೆ ಬರಲು ಈ ಲೋಕಜೀವನದಲ್ಲಿ ನನ್ನಂತಹ ಭಾಗ್ಯಶಾಲಿಗಳು ಬೇರೆ ಯಾರಾದರೂ ಇದ್ದಾರೆಯೇ? ನಿನ್ನ ಪಾದಧೂಳಿಯ ಸ್ಪರ್ಶದಿಂದ ನನ್ನ ದೇಹವು ಪರಿಶುದ್ಧವಾಯಿತು.

ತಾವು ಇಲ್ಲಿಗೆ ದಯಮಾಡಿಸಿದ ಕಾರಣ ಯಾವುದು? ನಿಮ್ಮ ಆಗಮನವು ಆಶ್ಚರ್ಯಕರವಾಗಿದೆ. ಏನು ಕಾರ್ಯ? ಯಾವ ಕೆಲಸವನ್ನು ಅಪ್ಪಣೆ ಮಾಡಲು ಬಂದಿರುವಿರಿ? ಈಗ ನನಗೆ ನಿಮ್ಮ ಆಗಮನದಿಂದ ಅತಿಶಯವಾದ ಗೌರವ ಉಂಟಾಗಿದೆ ಎಂದು ಹೇಳಿದನು.

ಆಗ ಶ್ರೀಕೃಷ್ಣನು

ನೀನು ಅತ್ಯುನ್ನತ ಸ್ಥಾನದಲ್ಲಿದ್ದರೂ ನಿನ್ನ ಮಾತಿನಲ್ಲಿ ಸತ್ಯ, ಶಕ್ತಿಯಲ್ಲಿ ಪರಾಕ್ರಮ, ಜ್ಞಾನದಲ್ಲಿ ವಿನಯ ಗುರುಹಿರಿಯರಲ್ಲಿ ವಿಶೇಷ ಮನ್ನಣೆಯೂ ನಿನ್ನಲ್ಲಿ ಶೋಭಿಸುತ್ತದೆ. ಕೌರವಾ, ಹಿರಿದಾದ ಐಶ್ವರ್ಯವಿದ್ದರೂ ನಿನ್ನಲ್ಲಿ ಅದೆಂತಹ ಸೌಜನ್ಯವೋ?

ನೈದಿಲೆಯ ಬಂಧುವಾದ ಚಂದ್ರನು ಭೂಮಿಯನ್ನೆಲ್ಲ ಬೆಳಗಿಸಿ ಕನ್ನೈದಿಲೆಯನ್ನು ಮಾತ್ರ ಸೋಕುವುದಿಲ್ಲ ಎಂದರೆ ಸೊಗಯಿಸುತ್ತಾನೆಯೇ? ಅಂತೆಯೇ ದುರ್ಯೋಧನಾ, ನಿನ್ನ ಬಂಧುಗಳಾದ ಪಾಂಡವರೆ ನಿನ್ನ ರಾಜ್ಯದಿಂದ

ಹೊರಗಿರಲು ಭೂಪತಿ (ಚಕ್ರವರ್ತಿ) ಎಂಬ ಹಿರಿಮೆ ನಿನಗೆ ಒಪ್ಪುತ್ತದೆಯೇ ?

ಇದುವರೆಗೆ ಏನೋ ಮನಸ್ತಾಪದಿಂದ ನೀವು ಒಬ್ಬರನ್ನೊಬ್ಬರು ಅಗಲಿದ್ದೀರಿ ಅಷ್ಟೆ. ನಿಮಗೂ ಅವರಿಗೂ ಬೇರೇನಾದರೂ ವಿರಸ ಉಂಟೆ ? ದುರ್ಯೋಧನಾ, ಬಿಸಿ ನೀರು ಎಷ್ಟೇ ಕುದಿದರೂ ಅದು ಮನೆಯನ್ನು ಸುಡಲಾರದು ಎಂಬ ನಾಣ್ಣುಡಿಯಂತೆ ನಿಮ್ಮೊಳಗೆ ಎಷ್ಟೇ ಸಿಟ್ಟಿದ್ದರೂ ಅದು ಕುಲನಾಶವನ್ನು ಉಂಟುಮಾಡಲಾರದು.

ಪಾಂಡವರು ರಾಜ್ಯದ ಪಟ್ಟಕ್ಕೆ ಮೊದಲು ಅರ್ಹರಾದವರು. ಯುದ್ಧಕ್ಕೆ ಶೂರರು. ಅವರು ಹಿಂದೆ ಆಳುತ್ತಿದ್ದ ರಾಜ್ಯವನ್ನು ಅವರಿಗೆ ಕೊಟ್ಟು ಆ ಸಮಾಚಾರವನ್ನು ದೂತರ ಮೂಲಕ ಹೇಳಿ ಕಳುಹಿಸು. ಅವರು ನಿನ್ನ ಸಹೋದರರು. ಅಂತಹ ಯೋಗ್ಯತೆಯುಳ್ಳವರು, ಸಾಮರ್ಥ್ಯ ಉಳ್ಳವರು ರಾಜರಾದರೆ ನಿನಗೆ ಅಸಾಧ್ಯವಾದುದು ಏನಾದರೂ ಉಂಟೇ ?

ಅವರು ಮೊದಲು ಆಳುತ್ತಿದ್ದ ನೆಲವನ್ನೇ ನಮಗೆ ಕೊಡು ಎನ್ನುವುದಿಲ್ಲ, ದಾಯಾದಿಗಳು ಎನ್ನುವುದಿಲ್ಲ. ಹಾಗಲ್ಲ ಹೀಗಲ್ಲ ಎನ್ನುವುದಿಲ್ಲ. ನೀನು ದಯೆಯಿಂದ ಕರುಣಿಸಿ ಕೊಟ್ಟುದನ್ನು ಸಾಕು ಎನ್ನುತ್ತಾ ಸ್ವೀಕರಿಸುತ್ತಾರೆ. ನೀನು ಹೇಳಿದುದನ್ನು ಅಕ್ಷರಶಃ ಪಾಲಿಸುತ್ತಾರೆ.

ಪಾಂಡವರಿಗೆ ಬೇರೆ ಯಾವ ಒಡಂಬಡಿಕೆಯೂ ಸಮಾಧಾನವೂ ರಕ್ಷಣೆಯೂ ಇಲ್ಲ ಎಂಬುದನ್ನು ನೀನು ಚೆನ್ನಾಗಿ ತಿಳಿದಿರಬೇಕು. ನಿರ್ವಸಿತ ರೀತಿಯಲ್ಲಿ ಇರುವ ಅವರಿಗೆ ಬೇರೆ ಮಾತಿಲ್ಲದೆ ರಾಜ್ಯವನ್ನು ದಯಪಾಲಿಸಿ ಕೊಡುವುದಾದರೆ ನಿನ್ನಯ ಒಳ್ಳೆಯತನ ಶಾಶ್ವತವಾಗಿ ನೆಲೆ ನಿಲ್ಲುವಂತೆ ಕಂಚಿ, ಪ್ರಸಿದ್ಧವಾದ ವಾರಣಾಸಿ, ಕಾಕಂದಿ, ಕುರುಸ್ಥಳ, ಶ್ರೇಷ್ಠವಾದ ವೃಕಸ್ಥಳ ಎಂಬ ಐದು ಗ್ರಾಮಗಳನ್ನು ಲೋಕ ಮೆಚ್ಚುವಂತೆ ಪಾಂಡವರಿಗೆ ಕೊಡು. ಎಂದು ಹೇಳಲು ದುರ್ಯೋಧನನು ಕ್ರೋಧಾಗ್ನಿಯಿಂದ ಉರಿಯುತ್ತಿರುವ ಹೃದಯವುಳ್ಳವನಾಗಿ ಶೌರ್ಯದ ಸೊಕ್ಕಿನ ಉಬ್ಬರದಲ್ಲಿ ಆಕಾಶದವರೆಗೂ ಸಿಡಿದು ಕೃಷ್ಣನಲ್ಲಿ ಈ ರೀತಿಯಾಗಿ ಹೇಳುತ್ತಾನೆ.

ಭೂಭಾಗವನ್ನು ಕೊಡು ಎಂದು ಆಸೆಪಟ್ಟು ಕೇಳುವುದು ನೀನು ಕಲಿತ ವಿದ್ಯೆ. ನೀನು ಯಾವಾಗಲೂ ಬೇಡುವ ಸ್ವಭಾವವುಳ್ಳವನು ತಾನೇ? ಅದು ನಿನ್ನ ಜಾಯಮಾನ. ಈಗ ಈ ಭೂಮಿಯು ಕುಲವಧುವಿನ ಹಾಗೆ. ಒಂದೇ ಭಾಗವುಳ್ಳವಳು. ಅಂದರೆ ಏಕಭೋಗ್ಯಳಾದವಳು. ಇನ್ನೊಬ್ಬನ ಜೊತೆಗೂಡಿ ಇರುವವಳಲ್ಲ. ಕತ್ತರಿಸಿದ ನೂಲನ್ನು ಪುನಃ ಮೊದಲಿನಂತೆ ಮಾಡಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಬೇರ್ಪಟ್ಟು ಹೋದ ಪಾಂಡವರನ್ನು ಪುನಃ ಸೇರಿಸಿಕೊಳ್ಳಲು ನಾನು ದಡ್ಡನೇ? ನಾವು ಒಂದೇ ವ್ಯಾಯಾಮ ಶಾಲೆಯಲ್ಲಿ ಕಲಿತವರಾಗಿದ್ದೇವೆ. ನೀವು ಮಹಿಮಾನ್ವಿತರು. ನಮ್ಮನ್ನು ಸುಮ್ಮನೆ ನೀವು ಆಯಾಸಪಡಿಸಬೇಡಿರಿ. ಯಾವ ದಾರಿಯಲ್ಲಿ ಬಂದಿದ್ದೀರೋ ಅದೇ ದಾರಿಯಲ್ಲಿ ಹಿಂತಿರುಗಿ ಹೋಗಿ.

## ◻ ಸ್ವಾರಸ್ಯ ಬರೆಯುವುದು

ಸಜ್ಜನದಂತೆನಗೆಕ್ಕಬಾಗೆ ನೋಡೀಗಳಿಳಾಲತಾಂಗಿ

- ಪ್ರಸ್ತುತ ಸಾಲಿನಲ್ಲಿರುವ ಸ್ವಾರಸ್ಯಕರವಾದ ಅಂಶಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು.

- ವಿದ್ಯಾರ್ಥಿಗಳು ಹೇಳಿದ ಅಂಶಗಳನ್ನು ಕರಿಹಲಗೆಯಲ್ಲಿ ಬರೆಯುವುದು.
- ವಿದ್ಯಾರ್ಥಿಗಳು ಗುಂಪುಗಳಲ್ಲಿ ಕುಳಿತು ಚರ್ಚಿಸಿ ಬರೆಯುವುದು.
- ಪ್ರತಿಯೊಂದು ಗುಂಪಿನಿಂದ ಒಬ್ಬರಂತೆ ಮಂಡಿಸುವುದು.

ಮಂಡನೆಯಲ್ಲಿ ಈ ಕೆಳಗಿನ ಅಂಶಗಳು ಮೂಡಿ ಬಂದಿರಬಹುದು.

- ಈ ಭೂಮಿಯು ಕುಲವಧುವಿನಂತೆ ಒಬ್ಬನೇ ಅನುಭವಿಸಲು ಯೋಗ್ಯವಾದುದು.
- ಕುಲವಧುವನ್ನು ಇತರರಿಗೆ ಹಂಚಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಹಸ್ತಿನಾವತಿ ರಾಜ್ಯವು ಬೇರೆಯವರಿಗೆ ಪಾಲು ಮಾಡಿಕೊಡುವಂತಹುದಲ್ಲ.
- 
- 

ಇತ್ಯಾದಿ ಅಂಶಗಳು.

- ಬಿಟ್ಟು ಹೋದ ಅಂಶಗಳನ್ನು ಅಧ್ಯಾಪಕರು ಸೂಚಿಸುವುದು.
- ಕ್ರೋಡೀಕರಿಸುವುದು.
- ಅಧ್ಯಾಪಕರ ಮಾದರಿ ಬರಹವನ್ನು ಪ್ರೊಜೆಕ್ಟರ್‌ನಲ್ಲಿ ಪ್ರದರ್ಶಿಸುವುದು.
- ವಿದ್ಯಾರ್ಥಿಗಳು ಬರೆದುಕೊಳ್ಳುವುದು.

**ಸ್ವಾರಸ್ಯ ಬರವಣಿಗೆ ಹೀಗೂ ಇರಬಹುದು**

ಶ್ರೀಕೃಷ್ಣನು ದುರ್ಯೋಧನನೊಂದಿಗೆ ಪಾಂಡವರಿಗೆ ಐದು ಗ್ರಾಮಗಳನ್ನು ಕೊಡಬೇಕೆಂದು ಹೇಳಿದಾಗ ದುರ್ಯೋಧನನು ಭೂಮಿಯನ್ನು ಆಶೆಪಟ್ಟು ಕೇಳುವುದು ನೀನು ಮೊದಲಿನಿಂದಲೂ ಕಲಿತು ಬಂದ ವಿದ್ಯೆ. ಆದರೆ ಈ ಭೂಮಿಯು ಕುಲವಧುವಿನಂತೆ ಒಬ್ಬನೇ ಅನುಭವಿಸುವುದಕ್ಕೆ ಯೋಗ್ಯವಾದುದು. ಇನ್ನೊಬ್ಬರೊಂದಿಗೆ ಪಾಲು ಮಾಡುವಂತಹುದಲ್ಲ. ಅಂದರೆ ಕುಲವಧು ಕೇವಲ ತನ್ನ ಗಂಡನಿಗೆ ಮಾತ್ರ ಹೊಂದಿಕೊಂಡಿರುವವಳು. ಹೇಗೆ ಕುಲವಧುವನ್ನು ಇತರರಿಗೆ ಹಂಚಲು ಸಾಧ್ಯವಿಲ್ಲವೋ ಅಂತೆಯೇ ನನ್ನ ಹಸ್ತಿನಾವತಿ ರಾಜ್ಯವು ಇನ್ನೊಬ್ಬರಿಗೆ ಪಾಲುಮಾಡಿಕೊಡುವಂತಹುದಲ್ಲ. ಅದು ನನಗೆ ಮಾತ್ರ ಮೀಸಲಾಗಿಟ್ಟದ್ದು ಎಂಬುದನ್ನು ರಾಜ್ಯವನ್ನು ಕುಲವಧುವಿನೊಂದಿಗೆ ಹೋಲಿಸುವುದರ ಮೂಲಕ ಬಹಳ ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ. ಈ ರಾಜ್ಯವನ್ನು ಪಾಂಡವರಿಗೆ ಎಷ್ಟು ಮಾತ್ರಕ್ಕೂ ಬಿಟ್ಟುಕೊಡಲು ಸಾಧ್ಯವಿಲ್ಲ ಎಂಬ ಭಾವ ಕೃಷ್ಣನೊಂದಿಗೆ ಕೌರವನು ಆಡುವ ಮಾತಿನಲ್ಲಿ ವ್ಯಕ್ತವಾಗುತ್ತದೆ.

**ಸರಳ ಕನ್ನಡದಲ್ಲಿ ಬರೆಯಿರಿ**

- ಭಾಗಮನಾಸೆವಟ್ಟಳಿಪಿ ಬೇೞ್ಪುದು ನಿನ್ನಯ ಕಲ್ತವಿದ್ದೆ.
- ಭೂಮಿಯ ಭಾಗವನ್ನು ಆಸೆಪಟ್ಟು ಕೇಳುವುದು ನೀನು ಕಲಿತ ವಿದ್ಯೆ.

**ಪೂರಕ ಓದಿಗೆ**

- ಪಂಪಭಾರತ ದೀಪಿಕೆ

  ಡಾ। ಡಿ.ಎಲ್.ನರಸಿಂಹಾಚಾರ್
- ಪಂಪ ಮಹಾಕವಿ ವಿರಚಿತ ಪಂಪಭಾರತಂ

  ಗದ್ಯಾನುವಾದ ಎನ್.ಅನಂತರಂಗಾಚಾರ್ (ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿತ)

***

# ಅಧ್ಯಾಪಕ ಪಠ್ಯ

# TEACHER TEXT

## ತರಗತಿ – X

## ಕನ್ನಡ – II

**ಘಟಕ – 1 : ಜೀವನಪ್ರೀತಿ**

**2ನೇ ಪಾಠ – ಗುಪ್ತದಾನಿ**

ಘಟಕ 1 – ಜೀವನಪ್ರೀತಿ – ಯೂನಿಟ್ ಗ್ರಿಡ್

ತರಗತಿ 10 – ಕನ್ನಡ II

| ಪಾಠದ ಹೆಸರು | ಆಶಯ/ತಿಳುವಳಿಕೆ/ಮನೋಭಾವ | ಪ್ರಕ್ರಿಯೆ | ಪೂರಕ ಸಾಮಗ್ರಿ | ಮೌಲ್ಯನಿರ್ಣಯ |
|---|---|---|---|---|
| 2. ಗುಪ್ತದಾನಿ | • ಸಮಾಜಸೇವಕರ ಕುರಿತು ಸಾಕಷ್ಟು ಸಾಹಿತ್ಯ ಕೃತಿಗಳು ಕನ್ನಡ ಸಾಹಿತ್ಯದಲ್ಲಿವೆ.<br>• ಸಮಾಜಸೇವೆ, ಪರೋಪಕಾರ ಮೊದಲಾದ ಉತ್ತಮ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.<br>• ನಾವು ಮಾಡುವ ದಾನ ಧರ್ಮಗಳಲ್ಲಿ ಯಾವುದೇ ಸ್ವಾರ್ಥ ಭಾವನೆಗಳಿ ರಬಾರದು.<br>• ನಮಗೆ ಸಾಧ್ಯವಿರುವಷ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು.<br>• ಸಮಾಜ ಸೇವಕರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.<br>• ಹಿಂದಿನವರು ಮಾಡಿಕೊಂಡು ಬಂದ ಸಮಾಜಸೇವೆಯನ್ನು ನಾವು ಮುಂದು ವರಿಸಬೇಕು. | • ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರಿಸುವುದು<br>• ಪಾತ್ರಚಿತ್ರಣ ಮಾಡುವುದು.<br>• ಸಂವಾದಿ ಪದಗಳನ್ನು ಬಳಸಿ ವಾಕ್ಯ ರಚಿಸುವುದು.<br>• ಲೇಖನ ಬರೆಯುವುದು.<br>• ಸಂಕ್ಷೇಪಿಸಿ ಬರೆಯುವುದು.<br>• ಪ್ರಶ್ನೆ ತಯಾರಿಸುವುದು.<br>• ವಿಶ್ಲೇಷಣ ಟಿಪ್ಪಣಿ ಬರೆಯು ವುದು. | ಡಾ. ಸುಧಾಮೂರ್ತಿಯವರ 'ಕಂಬನಿ ಒರೆಸುವ ಕೈ' ಲೇಖನ | • ಪ್ರಶ್ನೋತ್ತರ<br>• ಪಾತ್ರಚಿತ್ರಣ<br>• ವಾಕ್ಯರಚನೆ<br>• ಲೇಖನ<br>• ಗದ್ಯಭಾಗ<br>• ಪ್ರಶ್ನೆಗಳು<br>• ವಿಶ್ಲೇಷಣ ಟಿಪ್ಪಣಿ |

- **ಪ್ರಶ್ನೆಗಳಿಗೆ ಉತ್ತರ ಬರೆಯುವುದು**

ಮಕ್ಕಳಿಗೆ ಪಠ್ಯವಿಷಯದ ಆಶಯಗ್ರಹಣವಾಗಿದೆಯೇ ಎಂದು ನೋಡುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡು ಬಾಯ್ದೆರೆಯಾಗಿ ಹೇಳಲಿ. ಬಳಿಕ ವೈಯಕ್ತಿಕವಾಗಿ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಯೋಗ್ಯವಾದ ಸಲಹೆ ಸೂಚನೆಗಳನ್ನು ನೀಡುವುದು. ಸೂಚನೆಯ ಆಧಾರದಲ್ಲಿ ಮಕ್ಕಳು ತಂತಮ್ಮ ಉತ್ತರಗಳನ್ನು ಉತ್ತಮಪಡಿಸಲಿ. ತರಗತಿಯಲ್ಲಿ ಮಂಡಿಸಲಿ.

- **ಪಾತ್ರಚಿತ್ರಣ ಮಾಡುವುದು**

'ಗುಪ್ತದಾನಿ' ಅನುಭವ ಕಥನದಲ್ಲಿ ಬರುವ ಪ್ರಮುಖ ಪಾತ್ರಗಳನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಸೂಚಿಸುವುದು.

- ನಾಗರಾಜ
- ಸಾಕೇತ್
- ಡಾ। ಸುಧಾಮೂರ್ತಿ (ಲೇಖಕಿ)
- ಕರೀಂ

ಅವರು ಹೇಳಿದ ಪಾತ್ರಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅವುಗಳಲ್ಲಿ ನಾಗರಾಜರ ಪಾತ್ರವನ್ನು ಆರಿಸಿಕೊಂಡು ಅವರ ವ್ಯಕ್ತಿತ್ವವು ಈ ಪಾಠದಲ್ಲಿ ಹೇಗೆ ಮೂಡಿಬಂದಿದೆ ಎಂಬುದಾಗಿ ಮಕ್ಕಳಲ್ಲಿ ಕೇಳುವುದು. ಅವರ ಕುರಿತು ಒಂದೊಂದು ವಾಕ್ಯವನ್ನು ಒಬ್ಬೊಬ್ಬರಲ್ಲಿ ಹೇಳಿಸುವುದು.

- ನಾಗರಾಜರು ದಾನಿಯಾಗಿದ್ದರು.
- ನಿಸ್ವಾರ್ಥ ಮನೋಭಾವದವರಾಗಿದ್ದರು.
- 
- 

ಇತ್ಯಾದಿ ಅಂಶಗಳು

ಅಧ್ಯಾಪಕರು ಅವರು ಹೇಳಿದ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು.

ಬಳಿಕ ಅಧ್ಯಾಪಕರು ಕೆಲವು ವಾಕ್ಯಗಳನ್ನು ಹೇಳುವುದು.

- ಅವರು ಮಾನವೀಯತೆಯುಳ್ಳವರು.
- ಉತ್ತಮ ಸಮಾಜಸೇವಕರಾಗಿದ್ದರು.
- ಪ್ರಾಮಾಣಿಕರಾಗಿದ್ದರು.

•

•

ಅನಂತರ ಮಕ್ಕಳನ್ನು ಗುಂಪುಗಳನ್ನಾಗಿ ಮಾಡುವುದು.

- ಕರಿಹಲಗೆಯಲ್ಲಿ ಬರೆದ ವಾಕ್ಯಗಳನ್ನು ಕ್ರೋಡೀಕರಿಸಿ ನಾಗರಾಜರ ಪಾತ್ರ ಚಿತ್ರಣ ಬರೆಯಲು ಹೇಳುವುದು.
- ನಿಶ್ಚಿತ ಸಮಯದ ಬಳಿಕ ಗುಂಪಿಗೊಬ್ಬರಂತೆ ಮಂಡಿಸಲು ಹೇಳುವುದು.
- ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸಿ ಉತ್ತಮಪಡಿಸಲು ಅವಕಾಶ ನೀಡುವುದು.

ಬಳಿಕ ಅಧ್ಯಾಪಕರು ತಾವು ಸಿದ್ಧಪಡಿಸಿದ ಪಾತ್ರಚಿತ್ರಣವನ್ನು ಪ್ರೊಜೆಕ್ಟರ್‌ನ ಮೂಲಕ ತೋರಿಸಿ ಮಕ್ಕಳಲ್ಲಿ ಬರೆದುಕೊಳ್ಳಲು ಸೂಚಿಸುವುದು.

## ◻ ಪಾತ್ರಚಿತ್ರಣ ಹೀಗೂ ಇರಬಹುದು

'ಗುಪ್ತದಾನಿ' ಅನುಭವ ಕಥನದಲ್ಲಿ ಬರುವ ಪ್ರಧಾನ ಪಾತ್ರವೇ ನಾಗರಾಜರದು. ಉತ್ತಮ ಸಮಾಜಸೇವಕರಾದ ಅವರು ಲೇಖಕಿಯವರು ನಡೆಸುವ ವೈದ್ಯಕೀಯ ಶಿಬಿರಕ್ಕೆ ಉಚಿತವಾಗಿ ಔಷಧಿಗಳನ್ನು ಸರಬರಾಜು ಮಾಡುವ ತೀರ್ಮಾನವನ್ನು ಕೈಗೊಳ್ಳುವಲ್ಲಿ ಅವರ ಮಾನವೀಯತೆಯ ಅರಿವಾಗುತ್ತದೆ. ಲೇಖಕಿಯವರು ತಾವಾಗಿಯೇ ಅವರಲ್ಲಿಗೆ ಬಂದು ಔಷಧಿಯನ್ನು ತೆಗೆದುಕೊಳ್ಳುತ್ತೇನೆ ಎಂದಾಗ ಅವರು ತಮ್ಮ ಹಳೆಯ ಗುಮಾಸ್ತನಾದ ಕರೀಂನ ಮೂಲಕ ಕಳುಹಿಸಿಕೊಡುತ್ತೇನೆ ಎನ್ನುವಲ್ಲಿ ಅವರ ಸರಳ ಸಜ್ಜನಿಕೆಯ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. ತಾನು ಸಹಾಯ ಮಾಡುವುದು ಬೇರೆ ಯಾರಿಗೂ ತಿಳಿಯಬಾರದು ಎನ್ನುವ ನಾಗರಾಜರದು ಬಲಗೈಯಲ್ಲಿ ನೀಡುವ ದಾನ ಎಡಗೈಗೂ ತಿಳಿಯಬಾರದು ಎಂಬ ದಾನದ ಮೂಲತತ್ವವನ್ನು ಪಾಲಿಸುವ ಪ್ರಾಮಾಣಿಕ ದಾನಿಯ ಸ್ವಭಾವ. ಅವರೆಂದಿಗೂ ಪ್ರಚಾರಪ್ರಿಯರಾಗಿರಲಿಲ್ಲ. ಪ್ರಾರಂಭದಲ್ಲಿ ಹತ್ತು ಸಾವಿರ ರೂಪಾಯಿ ಮೌಲ್ಯದ ಔಷಧಿ ಕಳುಹಿಸುತ್ತಿದ್ದವರು ಮುಂದೆ ಅದನ್ನು ಐವತ್ತು ಸಾವಿರ ಮೌಲ್ಯಕ್ಕೆ ಹೆಚ್ಚಿಸುತ್ತಾರೆ. ನಿಸ್ವಾರ್ಥ ಮನೋಭಾವದವರಾದ ಅವರು ತಮ್ಮಲ್ಲಿದ್ದ ವಸ್ತುಗಳನ್ನು ಬಡವರಿಗೆ ದಾನಮಾಡುವ ವಿಶಾಲ ಮನೋಭಾವದವರು. ಲೇಖಕಿಯವರು ತಮ್ಮ ಕೆಲಸದ ಪ್ರೋಗ್ರೆಸ್ ರಿಪೋರ್ಟ್ ಮತ್ತು ಫೋಟೋ ಕಳುಹಿಸಿದಾಗ "ನನಗೆ ನಿಮ್ಮ ಕೆಲಸದ ಸಾಕ್ಷಿಯ ಅಗತ್ಯವಿಲ್ಲ, ನಿಮ್ಮ ಮೇಲೆ ನಂಬಿಕೆ ಇದೆ" ಎನ್ನುವಲ್ಲಿ ಅವರಿಗೆ ಎಲ್ಲರಲ್ಲೂ ವಿಶ್ವಾಸವಿತ್ತು ಎಂಬುದು ತಿಳಿದುಬರುತ್ತದೆ. ಒಟ್ಟಿನಲ್ಲಿ ಸಮಾಜಸೇವೆಗಾಗಿಯೇ ತನ್ನ ಜೀವನವನ್ನು ಮುಡಿಪಾಗಿಟ್ಟು ಸದ್ದಿಲ್ಲದೆ ಈ ಲೋಕದಿಂದ ಮರೆಯಾದ ನಾಗರಾಜರು ಕೊನೆಯವರೆಗೂ 'ಗುಪ್ತದಾನಿಯಾಗಿ'ಯೇ ಉಳಿದುಕೊಂಡು ಒಬ್ಬ ದಾನಿಯು ಹೇಗಿರಬೇಕು ಎಂಬುದಕ್ಕೆ ಉತ್ತಮ ಮಾದರಿಯಾಗಿ ಕಾಣಿಸಿಕೊಳ್ಳುತ್ತಾರೆ.

- **ವಿಶ್ಲೇಷಣ ಟಿಪ್ಪಣಿ ಬರೆಯುವುದು.**

ಸಮಾಜ ಸೇವೆ, ಪರೋಪಕಾರ ಇತ್ಯಾದಿ ವಿಷಯಗಳಲ್ಲಿ ಗುಪ್ತದಾನಿ ಅನುಭವ ಕಥನದಲ್ಲಿ ಬಂದ ನಾಗರಾಜ ಹಾಗೂ ಸಾಕೇತ್ ಇವರಿಬ್ಬರ ಅಭಿಪ್ರಾಯದ ಕುರಿತು ಕೆಲವು ಪ್ರಶ್ನೆಗಳನ್ನು ಕೇಳುವುದು.

- ಸಮಾಜ ಸೇವೆ ಎಂದರೇನು?
- ಸಮಾಜ ಸೇವೆಯ ಕುರಿತು ನಾಗರಾಜರ ಅಭಿಪ್ರಾಯವೇನು?
- ಸಾಕೇತ್‌ನ ಅಭಿಪ್ರಾಯವೇನು?

ಈ ಪ್ರಶ್ನೆಗಳಿಗೆ ಮಕ್ಕಳು ಹೇಳಿದ ಉತ್ತರವನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

- ನಾಗರಾಜರು ಕೊಡುಗೈ ದಾನಿಯಾಗಿದ್ದರು.
- ಅವರು ನಿಸ್ವಾರ್ಥಿಯಾಗಿದ್ದರು.
- ಸಾಕೇತ್ ಲಾಭದ ದೃಷ್ಟಿಯಿಂದ ಮಾತ್ರ ದಾನ ಮಾಡುತ್ತಿದ್ದನು.

ವಿದ್ಯಾರ್ಥಿಗಳು ಹೇಳದೆ ಬಿಟ್ಟು ಹೋದ ವಿಷಯಗಳನ್ನು ಅಧ್ಯಾಪಕರು ಸೇರಿಸುವುದು.

ಬಳಿಕ ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಬರೆಸುವುದು. ನಿರ್ದಿಷ್ಟ ಸಮಯದ ಬಳಿಕ ಗುಂಪಿಗೊಬ್ಬರಂತೆ ಮಂಡಿಸಲು ಹೇಳುವುದು. ಅಧ್ಯಾಪಕರು ಅಗತ್ಯವಿದ್ದಲ್ಲಿ ಸಹಕರಿಸಿ ತಮ್ಮ ಬರಹಗಳನ್ನು ಉತ್ತಮಪಡಿಸಲು ಅವಕಾಶ ನೀಡುವುದು. ತಾವು ತಯಾರಿಸಿದ ವಿಶ್ಲೇಷಣಾ ಟಿಪ್ಪಣಿಯನ್ನು ಐಸಿಟಿಯ ಮೂಲಕ ಪ್ರದರ್ಶಿಸುವುದು.

- **ವಿಶ್ಲೇಷಣ ಟಿಪ್ಪಣಿ ಹೀಗೂ ಇರಬಹುದು.**

ಸಮಾಜ ಸೇವೆ, ಪರೋಪಕಾರ, ಸಹಕಾರ ಮನೋಭಾವ ಇತ್ಯಾದಿಗಳು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಉತ್ತಮ ಮೌಲ್ಯಗಳಾಗಿವೆ. ಮಾನವನು ಒಬ್ಬ ಸಮಾಜಜೀವಿಯಾಗಿದ್ದಾನೆ. ಹಾಗಿರುವಾಗ ಪರಸ್ಪರ ಸಹಾಯ, ಸಮಾಜಸೇವೆ, ಪರೋಪಕಾರ ಮಾಡುವುದು ಅವನಿಗೆ ಅನಿವಾರ್ಯವಾಗಿದೆ. ಹಿಂದಿನ ಕಾಲದಲ್ಲಿ ಮನುಷ್ಯರು ಕರುಣಾಮಯಿಗಳಾಗಿದ್ದರು, ಪರಸ್ಪರ ಗೌರವಿಸುವವರಾಗಿದ್ದರು, ಬೇರೆಯವರ ಕಷ್ಟಗಳಿಗೆ ಸ್ಪಂದಿಸುವವರಾಗಿದ್ದರು, ಸಹನೆಯುಳ್ಳವರಾಗಿದ್ದರು. ಮಾತ್ರವಲ್ಲ ಸಮಾಜದಲ್ಲಿ ಅವಿಭಕ್ತ ಕುಟುಂಬ ಪದ್ಧತಿಯು ಜಾರಿಯಲ್ಲಿತ್ತು. ಒಂದೇ ಮನೆಯಲ್ಲಿ ತುಂಬಾ ಜನರು ವಾಸಿಸುತ್ತಿದ್ದರು. ಆಗ ಪರಸ್ಪರ ಗೌರವಿಸುವ, ಪ್ರೀತಿಸುವ, ಸಹಕರಿಸುವ ಮನೋಭಾವವನ್ನು ಮನೆಯಿಂದಲೇ ಕಲಿತುಕೊಳ್ಳುತ್ತಿದ್ದರು. ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಹೆಗಲಾಗುತ್ತಿದ್ದರು. ಈ ಎಲ್ಲ ಗುಣಗಳಿಂದಾಗಿ ಅವರು ಉಳಿದವರ ಕಷ್ಟಗಳಿಗೆ ತಾವಾಗಿಯೇ ಸ್ಪಂದಿಸುತ್ತಿದ್ದರು. ಜೀವನವು ಅವರಿಗೊಂದು ಪಾಠವಾಗಿತ್ತು. ಮಾತ್ರವಲ್ಲ ಅಂದಿನ ಕಾಲದಲ್ಲಿ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ಎಷ್ಟೋ ಅನುಭವಗಳು ಅವರ ಜೀವನದಲ್ಲಿ ಸಂಭವಿಸುತ್ತಿದ್ದವು. ಅವುಗಳು ಅವರಿಗೆ ಪಾಠವನ್ನು ಕಲಿಸುತ್ತಿದ್ದವು. ಆದರೆ ಈಗೀಗ ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಿದ್ದು ವಿಭಕ್ತ ಕುಟುಂಬವೇ ಎಲ್ಲೆಡೆಯಲ್ಲಿಯೂ ಕಂಡುಬರುತ್ತವೆ. ಈಗಿನ ಯುವಜನತೆ ಜೀವನಮೌಲ್ಯಗಳನ್ನು ಮರೆಯುತ್ತಿದ್ದಾರೆ. ಎಲ್ಲೆಡೆಯಲ್ಲಿಯೂ ಸ್ವಾರ್ಥವೇ

ತಲೆಯೆತ್ತುತ್ತಿದೆ. ಎಲ್ಲರಲ್ಲಿಯೂ ಕೇವಲ 'ನಾನು, ನನ್ನವರು,' ಎನ್ನುವ ಭಾವನೆ ಮನೆ ಮಾಡಿದೆ. ಇದಕ್ಕೆ ಉತ್ತಮ ಉದಾಹರಣೆ 'ಗುಪ್ತದಾನಿ' ಅನುಭವ ಕಥನದಲ್ಲಿ ಬರುವ ನಾಗರಾಜರ ಮಗ ಸಾಕೇತ್.

ನಾಗರಾಜರು ಲೇಖಕಿಯವರು ಮಾಡುತ್ತಿದ್ದ ಉಚಿತ ವೈದ್ಯಕೀಯ ಶಿಬಿರಕ್ಕೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ತಾವಾಗಿಯೇ ಕೈಜೋಡಿಸುವ ಇಚ್ಛೆಯನ್ನು ವ್ಯಕ್ತಪಡಿಸಿದವರು. ಮಾತ್ರವಲ್ಲ ಯಾವುದೇ ಪ್ರಚಾರಪ್ರಿಯರಲ್ಲದ ಅವರು ತಾವು ಮಾಡುವ ದಾನವನ್ನು ಗುಪ್ತವಾಗಿಡಲು ಬಯಸಿದವರು. ಆ ಶಿಬಿರಕ್ಕೆ ಅಗತ್ಯವಿರುವ ಔಷಧಿಗಳನ್ನು ತಾವೇ ತಮ್ಮ ಗುಮಾಸ್ತರಾದ ಕರೀಂನ ಮೂಲಕ ಕಳುಹಿಸಿಕೊಡುವ ಹೃದಯವೈಶಾಲ್ಯವುಳ್ಳವರು. ಒಟ್ಟಿನಲ್ಲಿ ನಾಗರಾಜರು ನಿಸ್ವಾರ್ಥ ಮನೋಭಾವದವರಾಗಿದ್ದು 'ಬಲಗೈಯಲ್ಲಿ ಮಾಡಿದ ದಾನವು ಎಡಗೈಗೆ ತಿಳಿಯಬಾರದು' ಎಂಬ ದಾನದ ಮೂಲತತ್ವವನ್ನು ಪಾಲಿಸುವ ಪ್ರಾಮಾಣಿಕ ದಾನಿಯ ಸ್ವಭಾವವನ್ನು ಪ್ರಕಟಿಸಿದ ಆದರ್ಶ ವ್ಯಕ್ತಿ. ಅವರ ಮಗನಾದ ಸಾಕೇತ್ ತೀರಾ ವಿರುದ್ಧ ಸ್ವಭಾವದವನು. ಅವನಿಗೆ ಪ್ರಚಾರವೇ ಬಹಳ ಮುಖ್ಯ ವಿಷಯವಾಗಿತ್ತು. ತಾನು ನೀಡುವುದರಿಂದ ತನಗೇನು ಲಾಭ ಎಂಬ ಆಧುನಿಕ ಮನಸ್ಥಿತಿಯವನಾಗಿದ್ದು ಕೇವಲ ವ್ಯವಹಾರಕ್ಕೆ ಮಾತ್ರ ಬೆಲೆಕೊಡುವವನಾಗಿದ್ದನು. ಎಲ್ಲದರಲ್ಲಿಯೂ 'ನಾನು ನನ್ನದು' ಎನ್ನುವ ಸ್ವಾರ್ಥ ಭಾವನೆಯೇ ಎದ್ದು ಕಾಣುತ್ತಿತ್ತು. ನಾಗರಾಜರು ಸಮಾಜಸೇವೆಗೆ ಹೆಚ್ಚು ಬೆಲೆ ಕೊಡುತ್ತಿದ್ದರೆ ಸಾಕೇತನು ಸಮಯಕ್ಕೆ, ಲಾಭಕ್ಕೆ ಹೆಚ್ಚು ಬೆಲೆ ಕೊಡುತ್ತಿದ್ದನು.

ಒಟ್ಟಿನಲ್ಲಿ ನಾಗರಾಜರು ನಿಸ್ವಾರ್ಥ ಮನೋಭಾವದ ಪ್ರತಿಪಾದಕರಾಗಿದ್ದರೆ ಸಾಕೇತನು ಸ್ವಾರ್ಥ ಮನೋಭಾವಕ್ಕೆ ಹಿಡಿದ ಕೈಗನ್ನಡಿಯಂತೆ ಗೋಚರಿಸುತ್ತಾನೆ.

## ◻ ಲೇಖನ ಬರೆಯುವುದು

ಪ್ರಾಕೃತಿಕ ವಿಕೋಪಗಳಲ್ಲಿ ಒಂದಾದ ಸುನಾಮಿಯ ವೀಡಿಯೋ ಕ್ಲಿಪ್ಪಿಂಗ್ ತೋರಿಸುವುದು. https://youtube/Zza9814jU4 (Tsunami in Japan 2004,2011) ಬಳಿಕ ಅದರ ಕುರಿತು ಒಂದೆರಡು ಪ್ರಶ್ನೆಗಳನ್ನು ಕೇಳುವುದು.

- ನೀವೀಗ ನೋಡಿದ ವೀಡಿಯೋ ಯಾವುದಕ್ಕೆ ಸಂಬಂಧಿಸಿದುದಾಗಿದೆ?
- ತ್ಸುನಾಮಿ ಎಂದರೇನು?
- ಅದರಿಂದ ಸಂಭವಿಸುವ ಅನಾಹುತಗಳೇನು?
- ಆ ಸಂದರ್ಭದಲ್ಲಿ ನಮ್ಮ ಪ್ರಾಣ ಆಸ್ತಿಗಳ ಸಂರಕ್ಷಣೆ ಮಾಡಲು ಏನೆಲ್ಲಾ ಮುಂಜಾಗ್ರತೆಗಳನ್ನು ವಹಿಸಬೇಕು.

ಈ ಪ್ರಶ್ನೆಗಳ ಕುರಿತು ಮಕ್ಕಳು ಗುಂಪಿನಲ್ಲಿ ಚರ್ಚೆ ನಡೆಸುವುದು.

ಬಳಿಕ ಗುಂಪಿನಲ್ಲಿ ತಮ್ಮ ಅಭಿಪ್ರಾಯಗಳನ್ನು ಒಟ್ಟು ಸೇರಿಸಿ ಲೇಖನ ಬರೆಯುವುದು.

ನಿಶ್ಚಿತ ಸಮಯದ ಬಳಿಕ ಗುಂಪಿಗೊಬ್ಬರಂತೆ ಮಂಡಿಸುವುದು.

ಬಳಿಕ ಅಧ್ಯಾಪಕರು ತಾವು ತಯಾರಿಸಿದ ಲೇಖನವನ್ನು ಪ್ರೊಜೆಕ್ಟರ್‌ನ ಮೂಲಕ ಪ್ರದರ್ಶಿಸುವುದು.

### ◘ ಲೇಖನ ಹೀಗೂ ಇರಬಹುದು

ಸಾಗರ ಅಥವಾ ಇನ್ನಿತರ ಜಲರಾಶಿಯಲ್ಲಿ ಅಗಾಧ ಪ್ರಮಾಣದ ಚಲನೆಯುಂಟಾದಾಗ ಜನಿಸುವ ಸಾಗರದ ತರಂಗಗಳ ಸರಣಿಗೆ 'ಸುನಾಮಿ' (ತ್ಸುನಾಮಿ) ಎಂದು ಕರೆಯಲಾಗುತ್ತದೆ. ಸುನಾಮಿಯು ಗಮನಕ್ಕೆ ಬಾರದಷ್ಟು ಸಣ್ಣ ಪ್ರಮಾಣದಿಂದ ಹಿಡಿದು 'ಅತ್ಯಂತ ಹಾನಿಕರವಾದ ನೈಸರ್ಗಿಕ ವಿಕೋಪದ ವರೆಗೂ ತನ್ನ ಪ್ರಭಾವ ಬೀರಬಲ್ಲುದಾಗಿದೆ.

ಕೆಲವು ಸಂದರ್ಭಗಳಲ್ಲಿ ಈ ರೀತಿಯ ಮುನ್ಸೂಚನೆಗಳೂ ದೊರೆಯಬಹುದು.

- ಭೂ ಕಂಪನ ಉಂಟಾಗಬಹುದು
- ಬಹಳಷ್ಟು ಅನಿಲ ಗುಳ್ಳೆಗಳು ಸಮುದ್ರದ ನೀರಿನ ಮೇಲೆ ಕಾಣಬಹುದು.
- ಅಲೆಗಳಲ್ಲಿರುವ ನೀರು ಬಹಳ ಉಷ್ಣವಾಗಿರಬಹುದು.
- ಸಮುದ್ರದ ನೀರು ಕವಟು ವಾಸನೆ ಬರಬಹುದು.
- ನೀರು ಚರ್ಮವನ್ನು ಚುಚ್ಚಬಹುದು.
- ಕಿವಿಗಡಚಿಕ್ಕುವ ಶಬ್ದ ಕೇಳಬಹುದು.
- ಸಮುದ್ರವು ಬಹಳಷ್ಟು ಹಿಂದೆ ಸರಿಯಬಹುದು.
- ದಿಗಂತದಲ್ಲಿ ಕೆಂಪು ದೀಪದ ಬೆಳಕು ಕಾಣಬಹುದು.

### ಎಚ್ಚರಿಕೆಗಳು ಮತ್ತು ತಡೆಗಟ್ಟುವಿಕೆ

ಸುನಾಮಿಗಳನ್ನು ತಡೆಗಟ್ಟಲಾಗುವುದಿಲ್ಲ. ಅಥವಾ ಕರಾರುವಾಕ್ಕಾಗಿ ಭವಿಷ್ಯ ನುಡಿಯಲಾಗುವುದಿಲ್ಲ. ಆದರೆ ಸದ್ಯದಲ್ಲೇ ಸಂಭವಿಸುವ ಸುನಾಮಿಯ ಮುನ್ನೆಚ್ಚರಿಕೆಯ ಕೆಲವು ಸೂಚನೆಗಳು ಲಭಿಸುತ್ತವೆ. ಅದಕ್ಕಾಗಿ ಪೂರ್ವ ಸೂಚನೆ ತಿಳಿಯಲು ಸಮುದ್ರದ ಅಡಿಯಲ್ಲಿ ಸ್ವಯಂಚಾಲಿತ ಉಪಕರಣಗಳನ್ನು ಇಡಲಾಗುತ್ತದೆ ಹಾಗೂ ಸುನಾಮಿಗಳಿಂದ ಉಂಟಾಗುವ ಹಾನಿಯನ್ನು ಕಡಿಮೆ ಮಾಡಲು ಅನೇಕ ಕ್ರಮಗಳನ್ನು ರೂಪಿಸಲಾಗುತ್ತದೆ. ಸಾಮಾನ್ಯವಾಗಿ ಮೊದಲ ಮುನ್ನೆಚ್ಚರಿಕೆ ಸಮೀಪದಲ್ಲಿರುವ ಪ್ರಾಣಿಗಳಿಂದ ಬರುತ್ತದೆ. ಅನೇಕ ಪ್ರಾಣಿಗಳು ಅಪಾಯವನ್ನು ಗ್ರಹಿಸಿ, ನೀರು ಸಮೀಪಿಸುವುದಕ್ಕೆ ಮುನ್ನವೇ ಎತ್ತರದ ಪ್ರದೇಶಗಳಿಗೆ ಪಲಾಯನ ಮಾಡುತ್ತವೆ. ಪ್ರಾಣಿಗಳಿಗೆ ಸುನಾಮಿ ದಡಕ್ಕೆ ಅಪ್ಪಳಿಸುವ ನಿಮಿಷ ಅಥವಾ ಘಂಟೆಗಳ ಮುಂಚೆ ಭೂಕಂಪದ ಶಬ್ದ ವೇಗವನ್ನು ಗ್ರಹಿಸುವ ಸಾಮರ್ಥ್ಯವಿದೆಯೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

### ಮುಂಜಾಗ್ರತಾ ಕ್ರಮವಾಗಿ

- ಜನರನ್ನು ಸುರಕ್ಷಿತ ತಾಣಗಳಿಗೆ ಸ್ಥಳಾಂತರಿಸಬಹುದು.
- ಅಗತ್ಯದ ದಾಖಲೆ ಪತ್ರಗಳನ್ನು ಸಂರಕ್ಷಿಸಬಹುದು.

- ಜನರ ಮನವೊಲಿಸಿ ಸುನಾಮಿಯ ತೀವ್ರತೆಯ ಕುರಿತು ಮನದಟ್ಟು ಮಾಡುವುದು.
- ಅಗತ್ಯದ ಆಹಾರ ವಸ್ತುಗಳು, ಪ್ರಾಥಮಿಕ ಆವಶ್ಯಕತೆಯ ವಸ್ತುಗಳು, ಔಷಧಿಗಳನ್ನು ಸಂಗ್ರಹಿಸುವುದು.
- ಅಗತ್ಯದ ಬಟ್ಟೆ ಬರೆಗಳನ್ನು ಸಂಗ್ರಹಿಸಿಡುವುದು.

ಇತ್ಯಾದಿ ಅಂಶಗಳನ್ನೂ ಒಳಗೊಂಡ ಲೇಖನ ಬರೆಯುವುದು.

- ಒಣಹಣ್ಣುಗಳನ್ನು ಸಂಗ್ರಹಿಸಿ ಇಡುವುದು.
- ಬೇಗನೆ ಹಾಳಾಗದ ಪದಾರ್ಥಗಳನ್ನು ಸಂಗ್ರಹಿಸಿಡುವುದು.
- ಪ್ರಾಥಮಿಕ ಅವಶ್ಯಕತೆಗಳಿಗೆ ಸಹಾಯಕವಾದ ಟಾರ್ಚ್, ಬೆಂಕಿಪೆಟ್ಟಿಗೆ, ರೇಡಿಯೋ, ಪವರ್ ಬ್ಯಾಂಕ್ ಇತ್ಯಾದಿಗಳನ್ನು ಒಂದು ದೊಡ್ಡ ಪೆಟ್ಟಿಗೆಯಲ್ಲಿ ಸಂಗ್ರಹಿಸಿಡುವುದು.

## ◘ ಸಂಕ್ಷೇಪಿಸಿ ಬರೆಯುವುದು

ಪಠ್ಯಭಾಗದಲ್ಲಿ ಕೊಟ್ಟಿರುವ ಗದ್ಯಭಾಗವನ್ನು ಮಕ್ಕಳು ಗಮನವಿಟ್ಟು ಓದುವುದು. ಅದನ್ನು ಅರ್ಥೈಸಿಕೊಂಡು ಮುಖ್ಯಾಂಶಗಳನ್ನು ಸಂಗ್ರಹಿಸುವುದು. ಅನಂತರ ಆಶಯ ಕೆಡದಂತೆ ಸಂಗ್ರಹಿಸಿ ಬರೆಯುವುದು. ತರಗತಿಯಲ್ಲಿ ಮಂಡಿಸುವುದು. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸುವುದು. ಬಳಿಕ ಅಧ್ಯಾಪಕರು ತಾವು ಬರೆದ ಸಂಕ್ಷೇಪಿಸಿದ ಭಾಗವನ್ನು ಎಲ್‌ಸಿಡಿಯಲ್ಲಿ ಪ್ರದರ್ಶಿಸಿ ಮಕ್ಕಳಲ್ಲಿ ಬರೆದುಕೊಳ್ಳಲು ಸೂಚಿಸುವುದು.

## ◘ ಸಂಕ್ಷೇಪಿಸಿ ಹೀಗೂ ಬರೆಯಬಹುದು

ಮೂಕಿಯಾದ ಅನಾಥ ಶುಭಾಳಿಗೆ ಮನೆಯ ಕೊಟ್ಟಿಗೆಯಲ್ಲಿ ಪ್ರೀತಿ ಪಾತ್ರವಾದ ಎರಡು ಹಸುಗಳಿದ್ದು ಅವು ಮಾತಿನ ನಾದಕ್ಕಿಂತ ಅವಳ ಮಾತಿಲ್ಲದ ವರ್ತನೆಯನ್ನೇ ಇಷ್ಟಪಡುತ್ತಿದ್ದವು. ಅವಳ ಪ್ರತಿಯೊಂದು ವರ್ತನೆಯನ್ನು ಅರ್ಥಮಾಡಿಕೊಂಡು, ಮಾತಾಡಬಲ್ಲ, ಬುದ್ಧಿಶಕ್ತಿಯುಳ್ಳ ಮನುಷ್ಯನಿಗಿಂತ ಹೆಚ್ಚು ಮಮತೆಯನ್ನು ತೋರಿಸುತ್ತಿದ್ದವು. ಅದರಲ್ಲಿಯೂ 'ಪಂಗುಳಿ' ಎಂಬ ಹಸುವನ್ನು ಸಮೀಪಿಸಿ ಅದರ ಮುಖಕ್ಕೆ ಮುಖವಿಟ್ಟು ನೋಡಿದರೆ ಅದು ಪ್ರೀತಿಯಿಂದ ನಾಲಿಗೆ ಚಾಚಿ, ಅವಳ ಕಣ್ಣನ್ನೇ ದಿಟ್ಟಿಸಿ ಇವೆಲ್ಲ ತನಗೆ ಇಷ್ಟ ಎಂದು ವ್ಯಕ್ತಪಡಿಸುತ್ತಿತ್ತು. ತನಗೆ ಬೇಸರವಾದಾಗ, ಯಾರಾದರೂ ತನ್ನ ಮನಸ್ಸು ನೋಯುವಂತೆ ಮಾತಾಡಿದಾಗ ಶುಭಾ ಈ ಹಸುಗಳ ಬಳಿಗೆ ಬಂದು ತನ್ನ ಮನಸ್ಸನ್ನು ಸಮಾಧಾನಗೊಳಿಸುತ್ತಿದ್ದಳು. ಮನೆಯಲ್ಲಿರುವ ಬೆಕ್ಕು, ಮೇಕೆಗಳಿಗೆ ಹೆಚ್ಚು ಆದರವನ್ನು ನೀಡದಿದ್ದರೂ ಕೆಲವೊಮ್ಮೆ ತನ್ನ ತೊಡೆಯೇರಿ ಮಲಗುತ್ತಿದ್ದ ಬೆಕ್ಕಿನ ಮೈಯನ್ನು ಪ್ರೀತಿಯಿಂದ ಸವರುತ್ತಿದ್ದಳು.

## ◘ ಪ್ರಶ್ನೆ ತಯಾರಿಸುವುದು

ಮಕ್ಕಳು ಈಗಾಗಲೇ ಗದ್ಯಭಾಗವನ್ನು ಓದಿ ಆಶಯಗಳು ಉತ್ತರವಾಗಿ ಬರುವಂತೆ ಪ್ರಶ್ನೆ ತಯಾರಿಸುವುದನ್ನು ಕಲಿತಿರುತ್ತಾರೆ. ಹಾಗೆಯೇ ಕೊಟ್ಟಿರುವ ಗದ್ಯಭಾಗವನ್ನು ಗಮನವಿಟ್ಟು ಓದುವುದು. ಅನಂತರ ಪ್ರಧಾನ ಆಶಯಗಳು

ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ಪ್ರತಿಯೊಬ್ಬರೂ ತಯಾರಿಸುವುದು. ತರಗತಿಯಲ್ಲಿ ಮಂಡಿಸುವುದು. ಉತ್ತಮವಾಗಿ ಪ್ರಶ್ನೆ ತಯಾರಿಸಿದವರನ್ನು ಅಭಿನಂದಿಸುವುದು. ಬಳಿಕ ಅಧ್ಯಾಪಕರು ತಾವು ತಯಾರಿಸಿದ ಪ್ರಶ್ನೆಗಳನ್ನು ಪ್ರೊಜೆಕ್ಟರ್‌ನಲ್ಲಿ ಪ್ರದರ್ಶಿಸುವುದು.

**ಪ್ರಶ್ನೆಗಳನ್ನು ಈ ರೀತಿಯಾಗಿ ತಯಾರಿಸಬಹುದು**

1. ಪ್ರಕೃತಿದತ್ತವಾದ ನಮ್ಮ ಶರೀರವನ್ನು ಕಾಪಾಡಿಕೊಳ್ಳುವುದು ಹೇಗೆ?
2. ಯೋಗಾಭ್ಯಾಸದ ಮೂಲಕ ನಾವು ಏನನ್ನು ಸಂಪಾದಿಸಬಹುದು?
3. ಭಾರತೀಯರು ಬಹುಪುರಾತನ ಕಾಲದಿಂದಲೂ ಹೇಗೆ ಜೀವಿಸುತ್ತಿದ್ದರು?
4. ಯೋಗಾಸನದ ಮುಖ್ಯ ಧ್ಯೇಯವೇನು?
5. ಯೋಗಾಸನದಿಂದ ಯಾವೆಲ್ಲಾ ರೋಗಗಳನ್ನು ಗುಣಪಡಿಸಬಹುದು?
6. ಯೋಗ ಎಂದರೇನು ?
7. ಯೋಗಾಸನದಿಂದ ಲಭಿಸುವ ಪ್ರಯೋಜನಗಳೇನು ?
8. ಯೋಗಾಭ್ಯಾಸಕ್ಕೆ ವಯಸ್ಸಿನ ಅಂತರವಿಲ್ಲ ಯಾಕೆ ?

**ಪೂರಕ ಓದಿಗೆ**

## ಕಂಬನಿ ಒರೆಸುವ ಕೈ

ತ್ಸುನಾಮಿ ಎನ್ನುವ ನಿಷ್ಕರುಣೆಯ ರಾಕ್ಷಸ ಅಲೆ ಕಡಲು ತೀರದ ಬೆಸ್ತರ ಜೀವನವನ್ನೇ ಅಲ್ಲೋಕಲ್ಲೋಲ ಮಾಡಿದೆ. ಇಂಥ ಸಮಯದಲ್ಲಿ ನಮ್ಮ ದೇಶದ ದಾನಿಗಳು ಹಿಂದೂ ಮುಂದೆ ನೋಡದೆ ತನು, ಮನ, ಧನದಿಂದ ಸಂತ್ರಸ್ತರಿಗೆ ಸ್ಪಂದಿಸಿದ್ದಾರೆ. ಹೆಸರಾಂತ ಪ್ರದೇಶಗಳಾದ ನಾಗಪಟ್ಟಣ, ವೇಲಾಂಕಣ್ಣಿ, ಕಡಲೂರು, ಕಾರೆಕಲ್‌ಗಳಲ್ಲಿ ಸಂತ್ರಸ್ತರಿಗೆ ಸಾಕುಬೇಕೆನ್ನುವಷ್ಟು ಸಹಾಯ ವಿವಿಧ ರೂಪದಲ್ಲಿ ಬರುತ್ತಿದೆ. ಸಾಮಾನ್ಯವಾಗಿ ಸೀರೆ. ಧೋತ್ರ, ಬೆಡ್‌ಶೀಟ್, ಟವೆಲ್, ಸೀಮೆಎಣ್ಣೆ, ಒಲೆ, ಪ್ಲಾಸ್ಟಿಕ್ ಸಾಮಾನು, ಸ್ಟೀಲ್ ಪಾತ್ರೆಗಳು, ಕುಡಿಯುವ ನೀರಿನ ಬಾಟಲಿ, ಚಾಪೆಗಳು ಇತ್ಯಾದಿ ಜನರಿಗೆ ಬಂದು ತಲುಪುತ್ತದೆ. ಕೇವಲ ಕೆಲವೇ ನಿಮಿಷ ತ್ಸುನಾಮಿ ಅಲೆ ಬಂದು ಬಡಿದರೂ ಜನರ ಜೀವನ ಮುಕ್ಕಾಗಿದೆ. ಸಂತ್ರಸ್ತರು ಮೊದಲು ಕೆಲವು ದಿನ ಮದುವೆ ಮಂಟಪದಂತೆ ವಿಶಾಲವಾದ ಜಾಗದಲ್ಲಿ ಸೇರಿ ಸಾಮೂಹಿಕವಾಗಿ ಊಟ ಮಾಡುತ್ತಿದ್ದರೂ ಕೆಲಕಾಲದ ನಂತರ ತಾವೇ ಪ್ರತ್ಯೇಕವಾಗಿರಬಯಸಿದ್ದು ಸ್ವಾಭಾವಿಕ. ಕಡಲ ತೀರದ ಈ ಜನರ ಊಟವೇ ಬೇರೆ. ಒಳನಾಡಿನ ಜನರು ತುಂಬಾ ಪ್ರೀತಿಯಿಂದ ಚಪಾತಿ ಪಲ್ಯ ಮಾಡಿ ಕಳುಹಿಸಿದರೂ ಅನ್ನವೇ ಮುಖ್ಯ ಆಹಾರವಾಗಿರುವ ಮೀನುಗಾರರಿಗೆ ಅದು ತಿನ್ನಲು ಕಷ್ಟವಾಯಿತು. ವೇಲಾಂಕಣಿಯ ರಸ್ತೆಯ ಎರಡೂ ಬದಿಯಲ್ಲಿ ರಾಶಿ ಹಾಕಿದ ಹಳೆಯ ಬಟ್ಟೆಗಳನ್ನು ನಾನೇ ಕಣ್ಣಾರೆ ಕಂಡಿದ್ದೇನೆ.

ನಮ್ಮ ತಂಡ ಇಂಥ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಜನರಿಗೆ ಅವಶ್ಯವಾದ ಆದರೆ ದಾನರೂಪದಲ್ಲಿ ಬರದೇ ಇರುವ ಅನೇಕ ವಸ್ತುಗಳು ಯಾವುವೆಂದು ಸೂಕ್ಷ್ಮವಾಗಿ ಪರಿಶೀಲಿಸಿದಾಗ ತಿಳಿಯಿತು. ಉದಾಹರಣೆಗೆ – ಮೊಂಬತ್ತಿ, ರೇಡಿಯೋ, ಟಾರ್ಚ್, ತಲೆಗೆ ಹಚ್ಚುವ ಎಣ್ಣೆ, ಅನಾಸಿನ್ ಮಾತ್ರೆಗಳು, ಅಲ್ಲದೇ ಅಳಿದುಳಿದ ಬೆಲೆಯುಳ್ಳ ಸಾಮಾನುಗಳನ್ನು ಜೋಪಾನ ಮಾಡಲು ಅವರ ಬಳಿಯಾವುದೇ ವಸ್ತುಗಳಿರಲಿಲ್ಲ. ಇಂಥ ಸಮಯದಲ್ಲಿ ಕಳ್ಳಕಾಕರ ಭಯವಿರುವುದರಿಂದ ಆ ವಸ್ತುಗಳು ಮಾಯವಾಗಬಹುದು. ಆದ್ದರಿಂದ ಅವರಿಗೊಂದು ಉತ್ತಮವಾದ ಪೆಟ್ಟಿಗೆ ಬೀಗದ ಸಮೇತ ಕೊಟ್ಟರೆ ಅವರಿಗೆ ಮಾನಸಿಕವಾಗಿ ಭದ್ರತೆಯ ಭಾವ ಬರಬಹುದು ಎಂದು ನನಗನ್ನಿಸಿತು. ಅದರೊಟ್ಟಿಗೆ ಇನ್ನೂ ಹಲವು ದಿನಸಿ, ಸೋಪು, ಟೂತ್‌ಪೇಸ್ಟ್ ಅಥವಾ ಟೂತ್‌ಪೌಡರ್, ಔಷಧಿ ಮುಂತಾದ ಸಾಮಾನುಗಳನ್ನು ಕೊಡಬೇಕೆಂದು ನಿರ್ಧರಿಸಿದೆ. ನಾನು ಬಹು ಹಿಂದೆ ಅಮೇರಿಕಾದಲ್ಲಿದ್ದಾಗ ಪರ್ವತಾರೋಹಿಗಳು 'ಸರ್ವೈವಲ್ ಕಿಟ್' ಎಂದು ಅತೀ ಅವಶ್ಯಕವಾದ ಸಾಮಾನಿನ ಪೆಟ್ಟಿಗೆಯನ್ನು ಒಯ್ಯುವುದನ್ನು ನೋಡಿದ್ದೆ. ಅದೇ ತತ್ವವನ್ನೊಳಗೊಂಡು ತ್ಸುನಾಮಿ ಸಂತ್ರಸ್ತರಿಗೆ ನಾವೊಂದು ಹೊಸ ಸರ್ವೈವಲ್ ಕಿಟ್ ಅನ್ನು ನಮ್ಮದೇ ರೀತಿಯಲ್ಲಿ ತಯಾರು ಮಾಡಿದೆವು.

ಈ ವಿಚಾರ ತಿಳಿದೊಡನೆಯೇ ಅನೇಕ ದಾನಿಗಳು ತಾವಾಗಿಯೇ ಮುಂದೆ ಬಂದರು. ಅಂಗಡಿಗಳಲ್ಲಿ ಸಾಮಾನು ಕೊಳ್ಳುವಾಗ ಅಂಗಡಿಯ ಮಾಲಿಕರು ದೊಡ್ಡ ರಿಯಾಯಿತಿಯೊಡನೆ ಸಾಮಾನನ್ನು ನಮ್ಮ ಜಾಗಕ್ಕೆ ಅವರೇ ತಂದುಕೊಡುವ ಸಭ್ಯತೆಯನ್ನು ತೋರಿಸಿದರು. ವಿಆರ್‌ಎಲ್ ಕಂಪೆನಿಯೂ ಶೇಕಡಾ ಐವತ್ತೈದರಷ್ಟು ರಿಯಾಯಿತಿ ಕೊಟ್ಟು ಸಾಮಾನನ್ನು ನಮ್ಮ ಜಾಗದಿಂದ ನಾವು ಹೇಳಿದ ಜಾಗಕ್ಕೆ ಕೊಂಡೊಯ್ಯುವ ಔದಾರ್ಯತೆಯನ್ನು ತೋರಿಸಿತು. ಎರಡು ಟ್ಯಾಕ್ಸಿ ಕಂಪೆನಿಯವರು ಹವಾನಿಯಂತ್ರಿತ ಕ್ವಾಲಿಸ್ ಗಾಡಿಯನ್ನು ಬಿಟ್ಟಿಯಾಗಿ ನಮಗಾಗಿಯೇ ಬಿಟ್ಟುಕೊಟ್ಟರು.

ನನ್ನ ವಿದ್ಯಾರ್ಥಿ ಜಾರ್ಜ್ ಜೋಸೆಫ್ ಎಂದೋ ಹೇಳಿಕೊಟ್ಟ ಋಣದ ಪಾಠವನ್ನು ನೆನಪಿಸಿಕೊಂಡು ಬೆಂಗಳೂರಿನಲ್ಲಿರುವ ಅವರ ಹೊಸಕಟ್ಟಡವನ್ನು ಈ ಸಾಮಾನುಗಳನ್ನು ಇಳಿಸಿಕೊಳ್ಳಲು, ಅವುಗಳನ್ನು ಪ್ಯಾಕ್ ಮಾಡಲು ಅನುವು ಮಾಡಿಕೊಟ್ಟರು. ಅಲ್ಲದೇ ಪ್ಯಾಕ್ ಮಾಡುವಾಗ ಮಧ್ಯೆ ಮಧ್ಯೆ ತನ್ನ ಸ್ವಂತ ಖರ್ಚಿನಿಂದ ಕಾಫಿ ತಿಂಡಿ ಸರಬರಾಜು ಮಾಡಿದರು.

ನಮ್ಮ ಈ ಹೊಸ ಜಾಗದಲ್ಲಿ ಒಂದು ಸಮಸ್ಯೆ ಇತ್ತು. ಅದರೆದುರಿನ ರಸ್ತೆ ಚಿಕ್ಕದು, ಚಿಕ್ಕ ಗಾಡಿಗಳಾದರೆ ಸಲೀಸಾಗಿ ಬರಬಹುದಿತ್ತು. ಆದರೆ ಟ್ರಕ್ ಬರಲು ಆಗುತ್ತಿರಲಿಲ್ಲ. ಆದರೆ ಈ ಜಾಗಕ್ಕೆ ಹೊಂದಿಕೊಂಡು ವಿಶಾಲವಾದ ಖಾಲಿ ಜಾಗವೊಂದಿತ್ತು. ಅಲ್ಲದೇ ಅದು ಕಾರ್ನರ್ ಸೈಟ್ ಆಗಿದ್ದಿತು. ನಾವು ತ್ಸುನಾಮಿ ಸರ್ವೈವಲ್ ಕಿಟ್ ಸಾಮಾನು ತುಂಬಿಸಿ ತುಂಬಿಸಿ ಪೇರಿಸುತ್ತಾ ಹೋದಂತೆ ಅದು ಒಂದು ಸಣ್ಣ ಗುಡ್ಡದಂತೆ ಕಾಣುತ್ತಿತ್ತು. ಈಗ ನಿಜವಾದ ಸಮಸ್ಯೆಯೆಂದರೆ ಈ ಸರ್ವೈವಲ್ ಕಿಟ್ ಅನ್ನು ವಿ.ಆರ್.ಎಲ್ ಟ್ರಕ್ಕಿಗೆ ತುಂಬಿಸುವ ಬಗೆ ಹೇಗೆ?' ಜಾರ್ಜ್ ನನಗೊಂದು ಸಲಹೆ ಕೊಟ್ಟರು.

"ಮ್ಯಾಡಂ, ಟ್ರಕ್ ಬಂದು ಹೋಗಲು ಬದಿಯ ಸೈಟ್ ಹೆಚ್ಚು ಅನುಕೂಲ. ಅದು ಮೂಲೆಯಲ್ಲಿದ್ದು ದೊಡ್ಡ ರಸ್ತೆಗೆ ಹೊಂದಿಕೊಂಡಿದೆ. ಅದರ ಒಡೆಯ ನನಗೆ ಪರಿಚಿತರು, ಅವರು ಈಗ ದೇಶದಲ್ಲಿ ಇಲ್ಲ. ಅವರ ಆರ್ಕಿಟೆಕ್ಟ್‌ಗೆ ಇಲ್ಲಿ ಕಟ್ಟಡ ಕಟ್ಟುವ ಕೆಲಸ ವಹಿಸಿದ್ದಾರೆ. ಅವರೂ ನನಗೆ ಪರಿಚಿತರೇ. ನಾನು ಅವರ ಆಫೀಸಿಗೆ ಫೋನ್ ಮಾಡಿ ಅನುಮತಿ ಕೇಳುತ್ತೇನೆ. ನೀವೇನೂ ಯೋಚನೆ ಮಾಡಬೇಡಿ. ಸಾಮಾನು ತುಂಬಿದ ಈ ಪೆಟ್ಟಿಗೆಗಳನ್ನು ಪಕ್ಕದ

ಸೈಟಿನಲ್ಲಿಡಿ. ಅಲ್ಲಿ ಕಾವಲುಗಾರರೂ ಇದ್ದಾರೆ" ಎಂದರು.

ಮರುದಿನ ಇಪ್ಪತ್ತೈದರ ಹರೆಯದ ಚುರುಕುಗಣ್ಣಿನ, ತೆಳ್ಳನೆಯ ಸುಂದರವಾದ ಜೀನ್ಸ್‌ದಾರಿ ಹುಡುಗಿಯೊಬ್ಬಳು ನಾವು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಬಂದಳು. ಮುಖದಲ್ಲಿ ಅದಮ್ಯ ಉತ್ಸಾಹ " ಮೇಡಂ, ಜಾರ್ಜ್ ನನ್ನ ಬಳಿ ನಿಮ್ಮ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ನಾನು ಪಕ್ಕದ ಸೈಟಿನ ಉಸ್ತುವಾರಿ ನೋಡಿಕೊಳ್ಳುವ ಆರ್ಕಿಟೆಕ್ಟಿನ ಸಹಾಯಕಿ. ನಮ್ಮದೇನೂ ಅಭ್ಯಂತರವಿಲ್ಲ. ನಮಗಂತೂ ಸಂತ್ರಸ್ತರಿಗೆ ಸಹಾಯ ಮಾಡಲು ಹೋಗಲು ಸಾಧ್ಯವಿಲ್ಲ. ನೀವು ಮಾಡುವ ಕೆಲಸಕ್ಕೆ ಸಹಾಯ ಮಾಡಿದರೆ ನಮಗೆ ತುಂಬಾ ಸಂತೋಷ. ಈ ಜಾಗದಲ್ಲಿ ಕೆಲಸ ಶುರುಮಾಡುವುದಕ್ಕೆ ಇನ್ನೂ ಒಂದು ವಾರವಿದೆ. ಅಲ್ಲಿಯವರೆಗೂ ಇದು ಬೀಡು ನೆಲ".

"ನಿಜವಾಗಿ ನಿಮಗೆ ನಮ್ಮಿಂದ ತೊಂದರೆ ಇಲ್ಲವೇ?" ಎಂದು ಮತ್ತೆ ಮತ್ತೆ ಕೇಳಿದೆ. "ಖಂಡಿತವಾಗಿಯೂ ಇಲ್ಲ ಮೇಡಂ, ಈಗ ನನ್ನ ಬಾಸ್ ಊರಲ್ಲಿಲ್ಲ, ಅವರ ವಾಪಸ್ಸು ಬಂದರೂ ತ್ಸುನಾಮಿ ಕೆಲಸಕ್ಕೆ ಇಲ್ಲವೆನ್ನುವುದಿಲ್ಲ ಎನ್ನುವ ಭರವಸೆ ನನಗಿದೆ" ಹುಡುಗಿ ಕುದುರೆಯಂತೆ ಕುಣಿಯುತ್ತಾ ಹೋಗಿಬಿಟ್ಟಳು.

ಆ ದಿನ ಸಂಜೆಗೆ ನಮ್ಮ ಕೆಲಸ ಮುಗಿಯಿತು. ನಮ್ಮ ಗುಂಪಿನ ಜನರಿಂದ ಈ ಸರ್ವೈವಲ್ ಕಿಟ್ ಎಲ್ಲವೂ ಪಕ್ಕದ ಸೈಟಿಗೆ ರವಾನೆಯಾದವು. ನಮಗೆಲ್ಲಾ ಹೊಟ್ಟೆ ತುಂಬಿದಷ್ಟು ತೃಪ್ತಿ. ಮರುದಿನ ಬೆಳಿಗ್ಗೆ ಟ್ರಕ್ ಬಂದು ಈ ಸರ್ವೈವಲ್ ಕಿಟ್‌ಗಳನ್ನು ಕೊಂಡೊಯ್ಯುವ ತನಕ ಬೇರೆ ಕೆಲಸವಿಲ್ಲ. ಇನ್ನೇನು ನಾವು ಮನೆಗೆ ಹೊರಡಬೇಕು ಅಷ್ಟರಲ್ಲಿ ಮರ್ಸಿಡಿಸ್ ಬೆಂಝ್ ಕಾರೊಂದು ಬಂದು ನಿಂತಿತು. ಅದರಿಂದ ಅತ್ಯಾಧುನಿಕ ಬಟ್ಟೆ ಧರಿಸಿದ ಕೈಯಲ್ಲಿ ಸೆಲ್‌ಫೋನ್ ಹಿಡಿದ ಮಧ್ಯವಯಸ್ಸಿನ ಅಪರಿಚಿತ ನಡೆದು ಬಂದರು. ಬಂದವರೆ ಕೋಪದಿಂದ ನನ್ನನ್ನು ನೋಡಿ "ಯಾರ ಅನುಮತಿ ಪಡೆದು ನೀವು ಈ ಟ್ರಂಕುಗಳನ್ನು ನಮ್ಮ ಸ್ಥಳದಲ್ಲಿ ಇರಿಸಿದ್ದೀರಿ?" ಎಂದರು.

ಆತನ ಗತ್ತು ಅಧಿಕಾರ ನೋಡಿ ಪೋಲೀಸು ತಪ್ಪು ಮಾಡಿದ ಕಳ್ಳನನ್ನು ಸಂಶಯಿಸುವಂತೆ ನನಗನ್ನಿಸಿತು. ಕ್ಷಣಾರ್ಧದಲ್ಲಿ ಈತನೇ ಆ ಆರ್ಕಿಟೆಕ್ಟ್ ಎಂದು ಆತನ ಗತ್ತಿನಿಂದ ಗ್ರಹಿಸಿದೆ. ಆದರೂ ವಿಚಲಿತಳಾಗದೆ ವಿನಯದಿಂದ "ಜಾರ್ಜ್ ಜೋಸೆಫ್‌ರು ನಿಮ್ಮ ಆಫೀಸಿನಿಂದ ಅನುಮತಿ ತೆಗೆದುಕೊಂಡಿದ್ದೇನೆ ಎಂದಿದ್ದಾರೆ. ಅಲ್ಲದೇ ನಿನ್ನೆ ನಿಮ್ಮ ಸಹಾಯಕಿ ಬಂದು ಅದನ್ನು ಅನುಮೋದಿಸಿದ್ದಾರೆ. ಆದ್ದರಿಂದ ನಿಮಗೆ ಈ ವಿಷಯ ತಿಳಿದಿದೆ ಎಂದು ತಿಳಿದಿದ್ದೆ" ಎಂದು ಹೇಳಿದೆ.

"ಇಲ್ಲ, ಖಂಡಿತವಾಗಿ ನನಗೆ ಈ ವಿಷಯ ತಿಳಿದಿಲ್ಲ. ನಾನು ಪ್ರವಾಸದಲ್ಲಿದ್ದೆ. ನೀವು ತ್ಸುನಾಮಿ ಕೆಲಸ ಮಾಡುತ್ತಿರಬಹುದು. ಆದರೆ ನನ್ನ ಅನುಮತಿಯಿಲ್ಲದೆ ಬರೇ ನನ್ನ ಆಫೀಸಿನ ಅನುಮತಿಯೊಂದಿಗೆ ಈ ಕೆಲಸ ಮಾಡಲಾರಿರಿ. ನೀವೊಬ್ಬ ಜವಾಬ್ದಾರಿ ಇರುವ ಹೆಂಗಸು ಈ ರೀತಿಯ ಬೇಜಬಾಬ್ದಾರಿ ಕೆಲಸ ಮಾಡಬಾರದು. ನಾನು ನನ್ನ ಕ್ಲೈಂಟಿಗೆ ಏನೆಂದು ಉತ್ತರ ಕೊಡಲಿ? ಈ ಜಾಗದಲ್ಲಿ ಕೆಲಸ ಮಾಡುವ ಜನರು ಈಗಲೇ ಬರುತ್ತಾರೆ. ಈ ಜಾಗವನ್ನು ರಕ್ಷಿಸುವುದು ನನ್ನ ಕರ್ತವ್ಯವಾಗಿದೆ".

ಆತನ ಮಾತಿನಿಂದ ಇನ್ನೂ ಅಚ್ಚರಿಯಾಯಿತು. ನಾನು ಮತ್ತೆ "ನನ್ನದು ತಪ್ಪಾಯಿತು, ಬಹುಶಃ ನಿಮಗೆ ಸುದ್ದಿ ಮುಟ್ಟಿರಲಿಲ್ಲವೋ ಏನೋ, ಇರಲಿ ಇದು ಬಡಜನರಿಗಾಗಿ ಮಾಡುವ ಕೆಲಸ. ದಯವಿಟ್ಟು ಇದೊಂದು ರಾತ್ರಿ ಈ ಟ್ರಂಕ್‌ಗಳನ್ನು ಇಟ್ಟುಕೊಳ್ಳಲು ಅವಕಾಶ ಕೊಡಿ' ಎಂದು ಅಂಗಲಾಚಿದೆ.

"ಅದು ಸಾಧ್ಯವೇ ಇಲ್ಲ ನೀವು ಮುಂಚೆ ತಿಳಿಸಿದ್ದರೆ ನಾನು ಇದೇ ಸೈಟಿನಲ್ಲಿ ಬೇರೆ ಜಾಗವನ್ನು ಕೊಡುತ್ತಿದ್ದೆ. ನನ್ನ ಅನುಮತಿಯನ್ನು ನೀವು ಪಡೆದಿಲ್ಲ ಈಗಲೇ ಇದೆಲ್ಲವನ್ನೂ ಈ ಜಾಗದಿಂದ ಖಾಲಿ ಮಾಡಿ, ಬೇಕಾದರೆ ರಸ್ತೆ ಬದಿಯಲ್ಲಿರಿಸಿ. ನಾನೊಂದು ಕ್ಷಣವೂ ಇದು ಇಲ್ಲಿರಲು ಬಿಡುವುದಿಲ್ಲ' ಎಂದು ಅಂದರದ್ದನ್ನೇ ಅನ್ನುವ ಚಂಡಿ ಹುಡುಗನಂತೆ ಹಠ ಹಿಡಿದರು.

ಈಗಾಗಲೇ ಆತನ ಮಾತಿನ ರೀತಿಯಿಂದ ಆತನ ಮನಸ್ಥಿತಿ ನನಗರ್ಥವಾಗಿತ್ತು. ಆತನಿಗೆ ಸ್ಥಳ ಕೊಡುವುದಕ್ಕಿಂತ ಹೆಚ್ಚಾಗಿ ತನ್ನ ಅಧಿಕಾರದ ಗರ್ವವನ್ನು ನನಗೆ ಮನದಟ್ಟು ಮಾಡಿಕೊಡುವುದೇ ಉದ್ದೇಶವಾಗಿತ್ತು. ಇಂಥವರಿಗೆ ತಿಳಿಹೇಳುವುದು 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ' – ಅಣ್ಣ ಬಸವಣ್ಣನವರು ಅನುಭವದಿಂದ ಹೇಳಿದ ವಚನ ನನಗೆ ನೆನಪಾಯಿತು.

'ಕಳ್ಳು ಕುಡಿದವರನ್ನು ಮಾತನಾಡಿಸಬಹುದು... ಆದರೆ ಸಿರಿಗರವ ಹೊಡೆದವರನ್ನು ಮಾತನಾಡಿಸಬಹುದೇ?'

ಈ ವೇಳೆಗಾಗಲೇ ನನ್ನ ತರುಣ ಸಹೋದ್ಯೋಗಿಗಳು ಆವೇಶಗೊಂಡರು. ಕೋಪದಿಂದ ಕೆಂಪಾದರು. ವಾಗ್ವಾದಕ್ಕೆ ಇಳಿಯಲು ಸನ್ನದ್ಧರಾದರು. ನಾನು ಅವರನ್ನು ತಡೆಹಿಡಿದೆ. "ಕ್ಷಮಿಸಿ ನಾವು ಈಗಲೇ ಈ ಜಾಗವನ್ನು ಬಿಟ್ಟು ಕೊಡುತ್ತೇವೆ. ನಿಮ್ಮ ಅಧಿಕಾರವನ್ನು ಅತಿಕ್ರಮಿಸಿದ್ದಕ್ಕಾಗಿ ನಾವು ಕೊಡುವ ತಪ್ಪು ದಂಡನೆ ಇದು. ನಮಗೆ ಶ್ರಮವಾದರೂ ಚಿಂತೆಯಿಲ್ಲ ನಮ್ಮ ಸಾಮಾನುಗಳನ್ನು ರಸ್ತೆ ಬದಿಯಲ್ಲಿ ಟ್ರಕ್ ಬರುವವರೆಗೂ ಇರಿಸಿಕೊಳ್ಳುತ್ತೇವೆ".

ಈ ಮಾತಿನಿಂದ ನಮ್ಮ ಗುಂಪಿನ ತರುಣ ಹುಡುಗ ಕುಮಾರ ಆತಂಕಗೊಂಡು "ಮೇಡಂ ರಸ್ತೆ ಬದಿಗಿರಿಸಿದರೆ ಯಾರಾದರೂ ಕಳವು ಮಾಡಬಹುದು ಇಲ್ಲವೇ ರಸ್ತೆಯಲ್ಲಿ ಇಂಥದ್ದೇ ಜನರು ಮತ್ತೆ ತಕರಾರು ತೆಗೆಯಬಹುದು" ಎಂದರು.

ನಾನು ನಗುತ್ತಾ ಹೇಳಿದೆ "ಕುಮಾರ ನೀವೇನೂ ಯೋಚನೆ ಮಾಡಬೇಡಿ, ಟ್ರಂಕ್ ಮೇಲೆ ತ್ಸುನಾಮಿ ಸಂತ್ರಸ್ತರಿಗಾಗಿ' ಎಂಬ ಬ್ಯಾನರನ್ನು ಹೊದಿಸೋಣ. ಸಾಮಾನ್ಯ ಜನರಾರೂ ಅದನ್ನು ಮುಟ್ಟುವ ಗೋಜಿಗಾಗಲೀ ತಕರಾರು ಮಾಡುವ ಗೋಜಿಗಾಗಲೀ ಹೋಗುವುದಿಲ್ಲ ಎನ್ನುವ ಭರವಸೆ ನನಗಿದೆ".

ಮರುದಿನ ಎಂದಿನಂತೆ ಹೇಳಿದ ಸಮಯಕ್ಕೆ ಟ್ರಕ್ ಬಂದು ನಮ್ಮ ಸಾಮಾನುಗಳನ್ನು ಕೊಂಡೊಯ್ದಿತು. ನನ್ನ ಜೊತೆಯಲ್ಲೇ ಕುಮಾರ ನನ್ನ ಆಫೀಸಿಗೆ ಬಂದರು. ಆತನ ಮುಖ ತೃಪ್ತಿಯ ಬದಲು ಇಳಿದುಹೋಗಿತ್ತು. ನನ್ನೆದುರಿಗೆ ಕುಳಿತು ಸೋತ ದನಿಯಲ್ಲಿ ಕೇಳಿದರು. "ಮೇಡಂ ಈ ಸಂತ್ರಸ್ತರು ನಿಮ್ಮ ಸಂಬಂಧಿಕರಲ್ಲ, ಭಾಷೆಯವರಲ್ಲ, ನಿಮ್ಮ ಪ್ರದೇಶದವರೂ ಅಲ್ಲ, ನಿಮ್ಮ ಬಳಗದವರಂತೂ ಅಲ್ಲವೇ ಅಲ್ಲ. ನಿನ್ನೇ ನೋಡಿದಂಥ ಆರ್ಕಿಟೆಕ್ಟ್ ಜನರೊಂದಿಗೆ ಹೊಡೆದಾಡಿ ಬಡಿದಾಡಿ ಅವರಿಗೆ ಸಹಾಯ ಮಾಡುವುದರಿಂದ ನಿಮಗೇನು ಬರುತ್ತದೆ? ದೈಹಿಕ ಆಯಾಸದ ಜೊತೆಗೆ ಮಾನಸಿಕ ಹಿಂಸೆ ಬೇರೆ. ಆದರೂ ನೀವು ಯಾತಕ್ಕಾಗಿ ಕೆಲಸ ಮಾಡುತ್ತೀರಿ?".

ನಾನು ಉತ್ತರಿಸಬೇಕು. ಎನ್ನುವಷ್ಟರಲ್ಲಿಯೇ ನನ್ನ ಕೋಣೆಯ ಬಾಗಿಲನ್ನು ಯಾರೋ ತಟ್ಟಿದಂತಾಯಿತು. ಒಳಗೆ ಬಂದವರು ಆರ್ಕಿಟೆಕ್ಟ್ ಸೈಟಿನ ಕಾವಲುಗಾರರಾಗಿದ್ದರು. ಬಹುಶಃ ಸೈಕಲ್ ತುಳಿದು ಬಂದಿದ್ದರಿಂದ ಆಯಾಸವಾಗಿತ್ತೋ ಏನೋ. ಮುಖದಲ್ಲಿ ದಣಿದ ಕಳೆ ಆದರೆ ಮಂದಹಾಸವಿತ್ತು. ಅವರನ್ನು ನೋಡಿ ನಾನು ಮತ್ತೇನಪ್ಪಾ ಹೊಸ ತಕರಾರು? ಎಂದು ವಿಚಲಿತಳಾದೆ.

"ಮೇಡಂ, ನಿನ್ನೆ ನಮ್ಮ ಬಾಸ್ ಮಾಡಿದ ಕೆಲಸ ತಪ್ಪು. ಅವರನ್ನೆದುರಿಸುವ ಶಕ್ತಿ ನಮ್ಮಂಥವರಿಗಿಲ್ಲ. ಎದುರಿಸಿದರೆ ಕೆಲಸ ಕಳೆದುಕೊಂಡೇನು ಎನ್ನುವ ಭಯ ಬೇರೆ. ನಿನ್ನೆ ರಾತ್ರಿ ನಿಮ್ಮ ಅನುಮತಿ ಕೇಳದೆ ನನ್ನ ಡ್ಯೂಟಿ ಮುಗಿದ ನಂತರ ನಾನು ರಸ್ತೆ ಬದಿಯಲ್ಲಿದ್ದ ನಿಮ್ಮ ಟ್ರಂಕ್‌ಗಳನ್ನು ಕಾದೆ. ಈ ನನ್ನ ಒಂದು ದಿನದ ಸಂಬಳವನ್ನು ನಿಮಗೆ ಕೊಡುತ್ತಿದ್ದೇನೆ. ಬಡವನಾದ ನನ್ನಿಂದ ತ್ಸುನಾಮಿ ಸಂತ್ರಸ್ತರಿಗೆ ಏನು ಸಾಧ್ಯವೋ ಅಷ್ಟು ಮಾಡಿದ್ದೇನೆ. ನೀವು ಇಂಥ ಕೆಲಸವನ್ನು ಮುಂದುವರಿಸಿರಿ. ದೇವರು ನಿಮಗೆ ಹೆಚ್ಚು ಆರೋಗ್ಯ ಮತ್ತು ಶಕ್ತಿಯನ್ನು ಕೊಡಲಿ'. ನನ್ನ ಉತ್ತರಕ್ಕಾಗಿ ಕಾಯದೆ ಕೋಳಿಯಾದ ಒಂದು ಕವರ್ ಅನ್ನು ಮುಂದಿರಿಸಿ ಹೊರಟುಹೋದರು. ನಾನು ಆ ಕವರ್ ತೆಗೆದೆ ಅದರಲ್ಲಿ ನೂರಾ ಅರವತ್ತು ರೂಪಾಯಿಗಳಿದ್ದವು. ನನ್ನ ಕಣ್ಣುಗಳು ತುಂಬಿ ಬಂದವು. ಒದ್ದೆಯಾದ ಕಣ್ಣುಗಳನ್ನು ಒರೆಸಿಕೊಳ್ಳದೆ ನಾನು ಕುಮಾರನ ಕಡೆಗೆ ತಿರುಗಿ ಎಂದೆ, "ಈ ಹಣ ನನಗೆ ಹದಿನಾರು ಲಕ್ಷಕ್ಕೆ ಸಮ. ನಿಮ್ಮ ಪ್ರಶ್ನೆಗೆ ಉತ್ತರ ಇಲ್ಲಿದೆ. ನಾನು ಇಂಥವರಿಗಾಗಿಯೇ ಕೆಲಸ ಮಾಡುತ್ತೇನೆ. ಇಂಥವರಿಗೆ ನಾನು ಜೀವನ ಪರ್ಯಂತ ಋಣಿಯಾಗಿದ್ದೇನೆ. ದೇವರು ನಮಗೆ ಕೈಗಳನ್ನು ಕೊಟ್ಟಿರುವುದು ಕೇವಲ ಚಿನ್ನದ, ರತ್ನದ ಬಳೆಗಳನ್ನು ಹಾಕಿಕೊಳ್ಳಲು ಅಲ್ಲ, ಅದರೊಂದಿಗೆ ಮತ್ತೊಬ್ಬರು ದುಃಖದಲ್ಲಿ ಇರುವಾಗ ಅವರ ಕಂಬನಿಗಳನ್ನು ಒರೆಸಲು, ದಾನ ಮಾಡಲು, ದುಡಿಯಲು ಕೊಟ್ಟಿರುತ್ತಾನೆ. ಕ್ರೌರ್ಯದ ಮರಳುಗಾಡಿನಲ್ಲಿ ಇವರಂಥ ಜನರು ಓಯಸಿಸ್‌ನಂತೆ ಕಾಣುತ್ತಾರೆ. ಅಂಥವರಿಗೆ ನಾನು ಕೃತಜ್ಞಳಾಗಿದ್ದೇನೆ.

'ಎನಿತು ಜನರಿಗೆ

ಎನಿತು ಜನ್ಮಗಳಿಗೆ

ನಾನು ಎನಿತು ಋಣಿಯೋ

ಹಾಗೆ ನೋಡಿದರೆ ಈ ಜನ್ಮವೆಂಬುದು

ಒಂದು ಋಣದ ಗಣಿಯೋ?"

ಕುಮಾರ್ ಅವಾಕ್ಕಾಗಿ ನೋಡುತ್ತಿದ್ದರು.

## ಎಲ್ಲಿ ಹೋದರೋ ಅವರು ಎಂದು ಬರುವರು?

**ಜೀವನ ಚರಿತ್ರೆ ಬರೆಯುವುದು**

- ಜೀವನ ಚರಿತ್ರೆಯ ಸ್ವರೂಪದ ಕುರಿತು ತರಗತಿಯಲ್ಲಿ ಚರ್ಚೆ ನಡೆಸುವುದು.
- ಜನನ, ಬಾಲ್ಯ, ಕೌಟುಂಬಿಕ ಹಿನ್ನೆಲೆ, ವಿದ್ಯಾಭ್ಯಾಸ, ಕೃತಿಗಳು, ಸಾಧನೆಗಳು, ಲಭಿಸಿದ ಗೌರವ, ಪ್ರಶಸ್ತಿಗಳು, ಇತ್ಯಾದಿ ವಿವರಗಳು ಇರಬೇಕು.
- ಕವನದಲ್ಲಿ ಶಿವರಾಮ ಕಾರಂತರ ಕುರಿತು ಕವಯತ್ರಿಯವರು ಹೇಳಿರುವ ಅವರ ವ್ಯಕ್ತಿತ್ವ, ಆಸಕ್ತಿ ಮುಂತಾದ ವಿವರಗಳನ್ನು ಬಳಸಿಕೊಂಡು ಜೀವನ ಚರಿತ್ರೆಯನ್ನು ಬರೆಯುವುದು.

- ಮಾಹಿತಿ ಸಂಗ್ರಹ – ಗ್ರಂಥಾಲಯ ಹಾಗೂ ಅಂತರ್ಜಾಲದ ಸಹಾಯದಿಂದ ಅಗತ್ಯ ಮಾಹಿತಿಗಳ ಸಂಗ್ರಹ. (ಕನ್ನಡ ವಿಕಿಪೀಡಿಯಾ)
- ಪಾಠಭಾಗದಲ್ಲಿ ಬಂದಿರುವ ಮಾಹಿತಿಗಳನ್ನು ಗುರುತಿಸುವುದು, ಎಲ್ಲಾ ವಿವರಗಳನ್ನು ಕ್ರೋಡೀಕರಿಸಿ ಜೀವನ ಚರಿತ್ರೆಯನ್ನು ತಯಾರಿಸುವುದು.
- ಗುಂಪಿನಲ್ಲಿ ತಯಾರಾದ ಜೀವನ ಚರಿತ್ರೆಯನ್ನು ಗುಂಪಿಗೊಬ್ಬರಂತೆ ತರಗತಿಯಲ್ಲಿ ಮಂಡಿಸಿ ಚರ್ಚೆಯ ಮೂಲಕ ಉತ್ತಮಗೊಳಿಸುವುದು.

ಘಟಕ – 2

# ಕಲ್ಲರಳಿ ಹೂವಾಗಿ

ಘಟಕ – 2 ಕಲ್ಲರಳಿ ಹೂವಾಗಿ

## ಯೂನಿಟ್ ಗ್ರಿಡ್

ತರಗತಿ 10 – ಕನ್ನಡ II

| ಪಾಠದ ಹೆಸರು | ಆಶಯ/ತಿಳುವಳಿಕೆ/ಮನೋಭಾವ | ಪ್ರಕ್ರಿಯೆ | ಪೂರಕ ಸಾಮಗ್ರಿ | ಮೌಲ್ಯನಿರ್ಣಯ |
|---|---|---|---|---|
| ಕಾಯಕ ನಿಷ್ಠೆ (ಗಾಂಧೀಜಿಯವರ ಆತ್ಮಕತೆಯ ಭಾಗ) | • ಗಾಂಧೀಜಿಯವರು ಕಾಯಕ ತತ್ವಕ್ಕೆ ಮಹತ್ವ ನೀಡುತ್ತಿದ್ದರು.<br>• ವೃತ್ತಿಯ ಘನತೆ ಗೌರವವನ್ನು ಗಾಂಧೀಜಿಯವರು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು.<br>• ಸ್ವಾವಲಂಬಿ ಜೀವನದ ಮಹತ್ವವನ್ನು ಅರಿತುಕೊಂಡು ಸ್ವಾವಲಂಬಿಯಾಗಿ ಬದುಕುವುದು.<br>• ಪ್ರತಿಯೊಂದು ಕೆಲಸಕ್ಕೂ ಅದರದ್ದೇ ಆದ ಗೌರವವಿದೆ ; ಕೆಲಸಗಳಲ್ಲಿ ಮೇಲು–ಕೀಳು ಇಲ್ಲ ಎಂದು ತಿಳಿಯುವುದು. | • ಪಾಠಭಾಗವನ್ನೂ ಓದುವುದು.<br>• ರೂಪಾಂತರಿಸಿ ಬರೆಯುವುದು.<br>• ವಿಸ್ತರಿಸಿ ಬರೆಯುವುದು.<br>• ಅಭಿಪ್ರಾಯ ಬರೆಯುವುದು.<br>• ಟಿಪ್ಪಣಿ ಬರೆಯುವುದು.<br>• ಲೇಖನ ಚಿಹ್ನೆ ಅಳವಡಿಸುವುದು. | • ಗಾಂಧೀಜಿಯವರ ಸರಳ ಜೀವನದ ಕುರಿತ ಸಾಕ್ಷ್ಯಪತ್ರ<br>• ಗಾಂಧೀಜಿಯವರ ಆತ್ಮಕಥೆ | • ರೂಪಾಂತರ<br>• ಲೇಖನಚಿಹ್ನೆ<br>• ಟಿಪ್ಪಣಿ<br>• ಅಭಿಪ್ರಾಯ ಟಿಪ್ಪಣಿ |

# ಬಾದಾಮಿ ಗುಹೆಯ ಬಳಿ

**ವಿಶ್ಲೇಷಿಸಿ ಬರೆಯುವುದು**

ವಿದ್ಯಾರ್ಥಿಗಳು ಬಾದಾಮಿ ಗುಹೆಯ ಬಳಿ ಕವನವನ್ನು ಓದಿ ಆಶಯವನ್ನು ತಿಳಿದುಕೊಂಡಿರುವರು. ಶಿಲ್ಪಿಗಳ ಕಠಿಣ ಪರಿಶ್ರಮದ ಕುರಿತು, ಅವರ ಬದುಕಿನ ನೋವು ಕಷ್ಟಗಳನ್ನು ಕುರಿತು ಚರ್ಚಿಸಿ ಆಶಯ ರೂಪೀಕರಣಕ್ಕೆ ಪೂರಕವಾದ ಕೆಲವು ಚಿತ್ರಗಳನ್ನು Labour image ನಿಂದ ಹಾಗೂ machinary labour work ಎಂಬ site ವಿಳಾಸದಿಂದ download ಮಾಡಿದ ಚಿತ್ರಗಳನ್ನು ತೋರಿಸುವುದು ಬಳಿಕ ಕೆಲವು ಪ್ರಶ್ನೆಗಳನ್ನು ಕೇಳುವುದು.

- Labour image ನಲ್ಲಿ ನೀವು ನೋಡಿದ ಚಿತ್ರಗಳು ಏನನ್ನು ತಿಳಿಸುತ್ತವೆ?
- ಹಿಂದಿನ ಕಾಲದಲ್ಲಿ ವೃತ್ತಿಯಲ್ಲಿ ಶ್ರಮಕ್ಕಿರುವ ಮಹತ್ವವೇನು?
- Machinary Labour work ಚಿತ್ರಗಳು ಏನನ್ನು ತಿಳಿಸುತ್ತವೆ?
- ಇವುಗಳ ನಡುವೆ ನೀವು ಗುರುತಿಸಿದ ವ್ಯತ್ಯಾಸಗಳೇನು?
- ಬಾದಾಮಿ ಗುಹೆಯ ಶಿಲ್ಪರಚನೆಯ ಹಿಂದೆ ಶಿಲ್ಪಿಗಳ ಶ್ರಮ ಹೇಗಿದ್ದಿರಬಹುದು?
- ಊರಿನಲ್ಲಿ ಮನೆ, ನಿವೇಶನ ಸಮತಟ್ಟುಗೊಳಿಸುವುದನ್ನು ಮೊದಲು ಹೇಗೆ ಮಾಡಿಸುತ್ತಿದ್ದರು? ಇತ್ಯಾದಿ ಪ್ರಶ್ನೆಗಳನ್ನು ಕೇಳಿದ ಬಳಿಕ ಇಂದಿನ ಕಾಲದಲ್ಲಿ ಕೆಲಸದ ಕುರಿತು ಜನರ ಮನೋಭಾವವೇನು? ಎಂಬುದರ ಕುರಿತು ಚರ್ಚಿಸುವುದು. ಚರ್ಚೆಯಲ್ಲಿ ಕಂಡುಕೊಂಡ ಆಶಯಗಳನ್ನು ಪಟ್ಟಿ ಮಾಡುವುದು.
- ದೈಹಿಕ ಶ್ರಮದಿಂದಲೇ ಹೆಚ್ಚಿನ ಕೆಲಸಗಳು ನಡೆಯುತ್ತಿದ್ದವು
- ಕೆಲಸಕಾರ್ಯಗಳಲ್ಲಿ ಉದಾಸೀನತೆ, ಆಲಸ್ಯ ಇರಲಿಲ್ಲ.
- ತಮ್ಮ ಕೆಲಸಗಳನ್ನು ತಾವೇ ಮಾಡುತ್ತಿದ್ದರು.

ಇದರ ಆಧಾರದಲ್ಲಿ ವಿದ್ಯಾರ್ಥಿಗಳಲ್ಲಿ ವಿಶ್ಲೇಷಣಾತ್ಮಕ ಟಿಪ್ಪಣಿ ಬರೆಯಲು ಸೂಚಿಸುವುದು. ಬರೆದ ಟಿಪ್ಪಣಿಯನ್ನು ಆಯ್ದ ವಿದ್ಯಾರ್ಥಿಗಳಲ್ಲಿ ಮಂಡಿಸಲು ತಿಳಿಸುವುದು. ಬಳಿಕ ಅಧ್ಯಾಪಕರ ಮಾದರಿ ಬರಹವನ್ನು ಪ್ರದರ್ಶಿವುದು.

**ವಿಶ್ಲೇಷಣಾ ಬರಹ ಹೀಗೂ ಇರಬಹುದಲ್ಲವೇ?**

ಹಿಂದೆ 'ಕಾಯಕವೇ ಕೈಲಾಸ' ಎನ್ನುವ ಮಾತಿಗೆ ಪ್ರಾಧಾನ್ಯವಿತ್ತು. ಯಾವುದೇ ಕೆಲಸವಾಗಲಿ ಪ್ರಾಮಾಣಿಕತೆಯಿಂದ ಮಾಡುವುದು ಮುಖ್ಯವಾಗಿತ್ತು. 'ಬಾದಾಮಿ ಗುಹೆಯ ಬಳಿ' ಕವನದಲ್ಲಿ ಕಂಡುಬರುವ ಶಿಲ್ಪಿಗಳ ಶ್ರಮ, ವೃತ್ತಿಗೌರವ, ಸಮರ್ಪಣಾ ಮನೋಭಾವ ಹಾಗೂ ಕಾಯಕನಿಷ್ಠೆಯನ್ನು ಇಂದು ಕಾಣಲು ಸಾಧ್ಯವೇ? ಎಂಬ ಪ್ರಶ್ನೆ ಮೂಡುತ್ತದೆ. ಶ್ರಮಜೀವಿಗಳಾದ ಶಿಲ್ಪಿಗಳು ಕಲ್ಲಿನಲ್ಲಿ ಕಲೆಯನ್ನು ಮೂಡಿಸುವಾಗ ತಮ್ಮ ತನುಮನವನ್ನು ಸಂಪೂರ್ಣವಾಗಿ ಧಾರೆಯೆರೆಯುತ್ತಾರೆ. ಅಲ್ಲಿ ತಮಗಾದ ಕಷ್ಟ, ನೋವು, ಹಿಂಸೆಗಳನ್ನು ಗಣನೆಗೆ ತೆಗೆದುಕೊಳ್ಳದೆ

ಸತತ ಪರಿಶ್ರಮದಿಂದ ಶಿಲೆಗೆ ಜೀವ ತುಂಬುತ್ತಾರೆ. ಕಾಯಕ ತತ್ವವನ್ನು ತಮ್ಮ ಕೃತಿಯಿಂದ ಪ್ರತಿಪಾದಿಸುವ ಶಿಲ್ಪಿಗಳ ಬದುಕು ಉಳಿದವರಿಗೆ ಪ್ರೇರಣೆಯಾಗಬೇಕು.

ಇಂದಿನ ಸಮಾಜದಲ್ಲಿ ದುಡಿಮೆಯ ಬಗೆಗೆ ಜನರಿಗಿರುವ ಮನೋಭಾವ ಬದಲಾಗಿದೆ. ಯುವಜನರಿಗೆ ದುಡಿಮೆಯ ಮೇಲಿರುವ ಆಸಕ್ತಿ ಕಡಿಮೆಯಾಗಿದೆ. ಆಧುನಿಕ ಪ್ರಪಂಚದ ಐಷಾರಾಮದ ಜೀವನ ಯುವಜನರನ್ನು ಬಲವಾಗಿ ಸೆಳೆಯುತ್ತಿದೆ. ಮೈ ಮುರಿದು ಶ್ರಮವಹಿಸಿ ದುಡಿಯಲು ಆಸಕ್ತಿಯಿಲ್ಲ. ಆಡಂಬರದ ಜೀವನ ಮಾಡಬಯಸಿ ಹಣದ ಮಹತ್ವವರಿಯದೆ ದುಂದುವೆಚ್ಚ ಮಾಡುತ್ತಾರೆ. ಯುವಜನರು ಈ ರೀತಿಯಾಗಿ ಬೆಳೆಯಲು ಮುಖ್ಯವಾಗಿ ಹೆತ್ತವರೇ ಕಾರಣಕರ್ತರು. ತಮ್ಮ ಮಕ್ಕಳು ಶ್ರಮಪಡುವುದು ಹೆತ್ತವರಿಗೆ ಇಷ್ಟವಿಲ್ಲದ ವಿಚಾರವಾಗಿದೆ. ಆಧುನಿಕ ತಂತ್ರಜ್ಞಾನ, ಮಾಧ್ಯಮಗಳ ಪ್ರಭಾವಕ್ಕೆ ಒಳಗಾಗಿ ಇಂದಿನ ಯುವಜನರು ದಾರಿ ತಪ್ಪುತ್ತಿದ್ದಾರೆ. ಹಣದ ವ್ಯಾಮೋಹಕ್ಕೆ ಬಲಿಯಾಗಿ ಮಾಡುವ ಕೆಲಸದ ಮೇಲೆ ಶ್ರದ್ಧೆಯಿಲ್ಲದಾಗಿದೆ. ವೃತ್ತಿಗೌರವಕ್ಕೆ ಕೊಡುವ ಪ್ರಾಮುಖ್ಯತೆಯು ಕಡಿಮೆಯಾಗುತ್ತಿದೆ. ದುಡಿಮೆಯೆಂದರೆ ಕೇವಲ ಹಣಸಂಪಾದನೆ ಮಾತ್ರ ಎಂಬ ಮನೋಭಾವ ಹೊಂದಿದ್ದು ಆರ್ಥಿಕ ಅನಿವಾರ್ಯತೆಗಾಗಿ ದುಡಿಯುವುದಿದ್ದರೂ ತಮ್ಮ ಕೆಲಸಕ್ಕೆ ನ್ಯಾಯವೊದಗಿಸುವಲ್ಲಿ ವಿಫಲರಾಗುತ್ತಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಜೀವನದಲ್ಲಿ ನಿರ್ದಿಷ್ಟ ಗುರಿಯನ್ನಿರಿಸಿಕೊಂಡು ಅದಕ್ಕನುಗುಣವಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗುವವರು; ಉದ್ಯೋಗವನ್ನು ಸಂಪಾದಿಸಿ ಜೀವನದಲ್ಲಿ ಯಶಸ್ವಿಯಾಗುವವರೂ ಇದ್ದಾರೆ. ಹೆತ್ತವರು ಬಾಲ್ಯದಲ್ಲಿಯೇ ಮಕ್ಕಳಲ್ಲಿ ವೃತ್ತಿ ಸಮಾನತೆ, ಸಾಧನೆಯ ಛಲ ಇತ್ಯಾದಿ ಮನೋಭಾವವನ್ನು ಬೆಳೆಸುವ ಪ್ರಯತ್ನವನ್ನು ಮಾಡಬೇಕು. ಆ ಮೂಲಕ ಅವರಲ್ಲಿ ವೃತ್ತಿಗೌರವವನ್ನು ಬೆಳೆಸಿದಲ್ಲಿ ಕೆಲಸದ ಮೇಲೆ ಶ್ರದ್ಧೆಯುಳ್ಳ ಉತ್ತಮ ಯುವ ಸಮಾಜ ರೂಪುಗೊಳ್ಳುವುದರಲ್ಲಿ ಸಂಶಯವಿಲ್ಲ.

## ಹೀಗೊಂದು ಕನಸು ಹೀಗಿದೆ ಜೀವನ

- ಟಿಪ್ಪಣಿ ಬರೆಯುವುದು.

Bio diversity parks in Kerala schools ಎಂಬ ವಿಳಾಸವನ್ನು ಬಳಸಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ಬೆಳೆಯುವ ಜೀವವೈವಿಧ್ಯ ತೋಟಗಳ ವೀಡಿಯೋ ಕ್ಲಿಪ್ಪಿಂಗ್ ಒಂದನ್ನು ತೋರಿಸುವುದು. ಬಳಿಕ ವಿದ್ಯಾರ್ಥಿಗಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ವೀಡಿಯೋದಲ್ಲಿ ನೀವು ನೋಡಿದ ದೃಶ್ಯಗಳೇನು?
- ಈ ತೋಟಗಳ ವಿಶೇಷತೆಗಳೇನು?
- ಜೈವಿಕ ಕೃಷಿ ಎಂದರೇನು?
- ಜೈವಿಕ ಕೃಷಿಯಿಂದ ಪ್ರಯೋಜನವೇನು?
- ಶಾಲೆಗಳಲ್ಲಿ ಜೈವಿಕ ಉದ್ಯಾನವನಗಳನ್ನು ನಿರ್ಮಿಸುವುದರ ಉದ್ದೇಶವೇನು?
- ಜೈವಿಕ ಕೃಷಿಗೂ ರಾಸಾಯನಿಕ ಬಳಕೆಯ ಕೃಷಿಗೂ ಇರುವ ವ್ಯತ್ಯಾಸವೇನು?

ಮುಂತಾಗಿ ಕೇಳಿ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಎಲ್ಲರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಅಭಿಪ್ರಾಯ ಟಿಪ್ಪಣಿ ತಯಾರಿಸಲಿ.

**ಟಿಪ್ಪಣಿ ಹೀಗೂ ಇರಬಹುದಲ್ಲವೇ?**

ಮಾನವ ಪ್ರಕೃತಿಯ ಕೂಸು. ಸಕಲ ಜೀವರಾಶಿಗಳಿಗೆ ಪ್ರಕೃತಿಯೇ ಆಶ್ರಯತಾಣ. ಪ್ರಕೃತಿಯನ್ನು ಬಿಟ್ಟು ನಮಗೆ ಜೀವನವಿಲ್ಲ. ಆದರೆ ಮಾನವ ತನ್ನ ಸ್ವಾರ್ಥಬುದ್ಧಿಯಿಂದ ಎಲ್ಲವನ್ನೂ ತನಗೆ ಬೇಕಾದಂತೆ ಪರಿವರ್ತಿಸಿಕೊಂಡು ಜೀವಿಸುತ್ತಿದ್ದಾನೆ. ಮಾನವನ ಈ ಸಂಕುಚಿತ ಮನಸ್ಸಿಗೆ ಬಲಿಯಾದುದು ಮಾತ್ರ ಮೂಕ ಪ್ರಾಣಿಪಕ್ಷಿಗಳು. ನಮ್ಮಂತೆಯೇ ಬದುಕಲು ಎಲ್ಲಾ ಹಕ್ಕುಗಳು ಅವುಗಳಿಗಿದ್ದರೂ ಮಾನವನ ದುರಾಸೆಗೆ ಬಲಿಯಾಗಿ ಅಳಿವಿನಂಚಿನಲ್ಲಿವೆ. ವೈಜ್ಞಾನಿಕ ಪ್ರಗತಿಯ ಹೆಸರಿನಲ್ಲಿ ಗುಬ್ಬಚ್ಚಿ, ಗೂಬೆ, ಬಾವಲಿ, ಪತಂಗ, ಕಪ್ಪೆ ಇತ್ಯಾದಿ ಅನೇಕ ಜೀವಿಗಳ ಮಾರಣಹೋಮ ನಿತ್ಯ ನಡೆಯುತ್ತಿದೆ. ಮಾತ್ರವಲ್ಲದೆ ಸಸ್ಯಸಂಪತ್ತು ಬಹುತೇಕ ನಾಶವಾಗುತ್ತಿದೆ. ಇದು ಪ್ರಕೃತಿಯ ಅಸಮತೋಲನಕ್ಕೆ ಕಾರಣವಾಗಿದೆ. ಈ ನಿಟ್ಟಿನಲ್ಲಿ ಶಾಲೆಗಳಲ್ಲಿ ಜೈವಿಕ ಉದ್ಯಾನವನಗಳನ್ನು ಸ್ಥಾಪಿಸಬೇಕೆಂದು ಸರಕಾರವು ಆದೇಶವನ್ನು ಹೊರಡಿಸಿದೆ.

ಪ್ರಕೃತಿಯ ಸಮತೋಲನವನ್ನು ಕೆಡಿಸಿದರೆ ಅನೇಕ ಪ್ರಕೃತಿ ವಿಕೋಪಗಳನ್ನು ಎದುರಿಸಬೇಕಾಗಿ ಬರಬಹುದು. ವಿದ್ಯಾರ್ಥಿಗಳಲ್ಲಿ ಈ ಸಮಸ್ಯೆಯ ಕುರಿತು ಅರಿವು ಮೂಡಿಸಿ ಪ್ರಕೃತಿಯನ್ನು ಉಳಿಸುವ ಕಾರ್ಯದತ್ತ ಅವರನ್ನು ಪ್ರೇರೇಪಿಸಬೇಕು. ಪ್ರಕೃತಿ ಹಾಗೂ ಪ್ರಕೃತಿಯಲ್ಲಿರುವ ಎಲ್ಲ ಜೀವಿಗಳನ್ನು ಪ್ರೀತಿಸುವ ಮನೋಭಾವ ಮೂಡಬೇಕು. ಸ್ವಯಂಪ್ರೇರಣೆಯಿಂದ ಅದರ ರಕ್ಷಣೆಗೆ ಅವರು ಸಿದ್ಧರಾಗಬೇಕು. ಶಾಲೆಗಳಲ್ಲಿ ಜೈವಿಕ ಉದ್ಯಾನವನಗಳನ್ನು ಸ್ಥಾಪಿಸುವುದರಿಂದ ಅಳಿವಿನಂಚಿನಲ್ಲಿರುವ ಅನೇಕ ಔಷಧೀಯ ಸಸ್ಯಗಳು, ಫಲ ನೀಡುವ ಗಿಡಮರಗಳು, ಸುಗಂಧ ಬೀರುವ ಹೂವಿನ ಗಿಡಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ಪರಿಸರದಲ್ಲಿರುವ ಅನೇಕ ಪಕ್ಷಿಗಳಿಗೆ, ಪತಂಗಗಳಿಗೆ ಇದೊಂದು ಆಶ್ರಯತಾಣವಾಗುವುದರೊಂದಿಗೆ ನಿರಂತರವಾಗಿ ವಿದ್ಯಾರ್ಥಿಗಳಿಗೆ ಇದನ್ನು ವೀಕ್ಷಿಸಲು, ನಿರೀಕ್ಷಿಸಲು ಅನುವು ಮಾಡುವುದರಿಂದ ಪ್ರಕೃತಿಯ ಮೇಲೆ ಅಭಿಮಾನ ಮೂಡುತ್ತದೆ. ಪ್ರಾಕೃತಿಕ ವಿದ್ಯಮಾನಗಳ ಹಾಗೂ ಜೀವ ವೈವಿಧ್ಯಗಳ ನಿರೀಕ್ಷಣೆಗೆ ಅನುವು ಮಾಡಿದಂತಾಗುತ್ತದೆ. ಶಾಲೆಯಲ್ಲಿ ಉದ್ಯಾನವನಗಳನ್ನು ಸ್ಥಾಪಿಸುವುದರಿಂದ ಅದರ ಪೋಷಣೆ ಹಾಗೂ ರಕ್ಷಣೆಗಳನ್ನು ವಿದ್ಯಾರ್ಥಿಗಳೇ ಮಾಡಬೇಕಾದುದರಿಂದ ಅವರಿಗೆ ಕೃಷಿ ಕಾರ್ಯದಲ್ಲಿ ಆಸಕ್ತಿಯನ್ನೂ ಅರಿವನ್ನೂ ಮೂಡಿಸುವುದಕ್ಕೆ ಸಾಧ್ಯವಾಗುತ್ತದೆ.

# 3. ಕಾಯಕ ನಿಷ್ಠೆ

## ▫ ಅಭಿಪ್ರಾಯ ಬರೆಯುವುದು

'ಕಾಯಕ ನಿಷ್ಠೆ' ಪಾಠದ ಆಶಯವನ್ನು ವೈಯಕ್ತಿಕವಾಗಿ ಹೇಳಿಸುವುದು. ವಿದ್ಯಾರ್ಥಿಗಳು ಹೇಳಿದ ಆಶಯವನ್ನು ಕರಿಹಲಗೆಯಲ್ಲಿ ಬರೆಯುವುದು. ಅದರ ಬಗ್ಗೆ ವಿದ್ಯಾರ್ಥಿಗಳು ಅಭಿಪ್ರಾಯವನ್ನು ಹೇಳಲಿ. ಕ್ರೋಡೀಕರಿಸಿದ ಬಳಿಕ ಸ್ವಂತ ಅಭಿಪ್ರಾಯದೊಂದಿಗೆ ಮಂಡಿಸಿ ಪರಿಷ್ಕರಿಸಿ ಬರೆಯಲಿ.

ಅಭಿಪ್ರಾಯ ಹೀಗಿರಬಹುದಲ್ಲವೇ?

ಸಮಾಜದಲ್ಲಿ ಪ್ರತಿಯೊಬ್ಬರೂ ಏನಾದರೊಂದು ದೈಹಿಕ ಕೆಲಸವನ್ನು ಮಾಡಬೇಕು. ಕೆಲಸಗಳಲ್ಲಿ ಮೇಲು ಕೀಳೆಂಬುದಿಲ್ಲ. ಪ್ರತಿಯೊಂದು ಕೆಲಸವೂ ಪವಿತ್ರ ಎಂದು ಬಸವಣ್ಣನವರು ತಮ್ಮ ಕಾಯಕ ತತ್ವದಲ್ಲಿ ಹೇಳಿದ್ದಾರೆ. ಅವರ ಈ ತತ್ವವನ್ನು ಸಂಪೂರ್ಣವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡವರಲ್ಲಿ ಮಹಾತ್ಮಗಾಂಧೀಜಿಯವರೂ ಒಬ್ಬರಾಗಿದ್ದಾರೆ.

ಗಾಂಧೀಜಿಯವರು ದೈಹಿಕ ಕೆಲಸಕ್ಕೆ ಹೆಚ್ಚು ಒತ್ತು ನೀಡಿದ್ದರು. ಶ್ರಮಪಟ್ಟು ಕೆಲಸ ಮಾಡುವುದರಿಂದ ದೇಹಕ್ಕೆ ವ್ಯಾಯಾಮ ದೊರೆಯುತ್ತದೆ. ಆರೋಗ್ಯ ವೃದ್ಧಿಸುತ್ತದೆ ಎಂಬುದು ಅವರ ಅಭಿಪ್ರಾಯ. ಯಾವುದೇ ಕೆಲಸವಾಗಲಿ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡಬೇಕು. ಅದುವೇ ಆ ಕೆಲಸಕ್ಕೆ ನೀಡುವ ಗೌರವ. ಗಾಂಧೀಜಿಯವರು ತಮ್ಮ ಮನೆಗೆಲಸಕ್ಕೆ ಯಾವುದೇ ಕೆಲಸದಾಳುಗಳನ್ನು ನೇಮಿಸುತ್ತಿರಲಿಲ್ಲ. ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಅಡುಗೆ ಮಾಡುವುದು ಹಾಗೂ ಪಾಯಿಖಾನೆ ತೊಳೆಯುವ ಕೆಲಸವನ್ನು ಸ್ವತಃ ಅವರೇ ಮಾಡುತ್ತಿದ್ದರು. ಇದರ ಫಲವಾಗಿ ಅವರ ಮಕ್ಕಳೂ ಅವರವರ ಕೆಲಸಗಳನ್ನು ಮಾಡಿಕೊಳ್ಳುವುದರ ಜೊತೆಗೆ ಗಾಂಧೀಜಿಯವರಿಗೆ ನೆರವಾಗುತ್ತಿದ್ದರು. ಪಾಯಿಖಾನೆ ತೊಳೆಯುವುದು ಎಂಬುದು ಅವರಿಗೆ ಯಾವುದೇ ಅಸಹ್ಯವನ್ನುಂಟುಮಾಡುತ್ತಿರಲಿಲ್ಲ. ಇದು ಕೆಲಸದ ಮೇಲೆ ಪ್ರತಿಯೊಬ್ಬರಿಗೆ ಮೂಡಬೇಕಾದ ಭಾವನೆ. ಸಾಮಾನ್ಯವಾಗಿ ಕೆಲಸ ಎಂದರೆ ಕಚೇರಿಯಲ್ಲಿ ಕುಳಿತು ಮಾಡುವುದು ಮಾತ್ರ ಎಂಬ ಭಾವನೆ ಎಲ್ಲರಲ್ಲಿದೆ. ಆದರೆ ಪಾಯಿಖಾನೆ ತೊಳೆಯುವುದು, ಕಸ ಗುಡಿಸುವುದೂ ಕೆಲಸವೇ. ಕಚೇರಿಯಲ್ಲಿ ಮಾಡುವ ಕೆಲಸದ ಅದೇ ಪ್ರಾಮಾಣಿಕತೆ, ಗೌರವ, ನಿಷ್ಠೆ ಉಳಿದೆಲ್ಲಾ ಕೆಲಸಗಳಲ್ಲಿಯೂ ಇರಬೇಕು.

## ▫ ವಿಸ್ತರಿಸಿ ಬರೆಯುವುದು

' ಕಾಯಕವೇ ಕೈಲಾಸ' ಗಾದೆ ಮಾತಿನ ವಾಚ್ಯಾರ್ಥ, ಸೂಚ್ಯಾರ್ಥಗಳನ್ನು ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಹೇಳಲಿ. ಈ ಗಾದೆಯು ಗಾಂಧೀಜಿಯವರ ಕಾಯಕನಿಷ್ಠೆಗೆ ಎಷ್ಟರಮಟ್ಟಿಗೆ ಅನ್ವಯವಾಗುತ್ತದೆ ಎಂಬುದನ್ನು ತರಗತಿಯಲ್ಲಿ ಚರ್ಚಿಸುವುದು. ಚರ್ಚೆಯಲ್ಲಿ ಗಾಂಧೀಜಿಯವರ ಕಾಯಕನಿಷ್ಠೆಯ ಅಂಶಗಳನ್ನು ಪಟ್ಟಿ ಮಾಡುವುದು.

- ಗಾಂಧೀಜಿಯವರು ಗೋಧಿ ಬೀಸುವುದು.

- ಪಾಯಿಖಾನೆ ಗೃಹ ಶುದ್ಧ ಮಾಡುವುದು.
- ದೇಹಶ್ರಮದ ಕೆಲಸಗಳನ್ನು ಮಾಡುವುದು.
-
-
-

ಈ ಅಂಶಗಳನ್ನಿಟ್ಟುಕೊಂಡು ಕಾಯಕವೇ ಕೈಲಾಸ ಗಾದೆ ಮಾತನ್ನು ವಿಸ್ತರಿಸಿ ಬರೆಯಲು ಸೂಚಿಸುವುದು.

ಗಾದೆಮಾತಿನ ವಿಸ್ತರಣೆ ಹೀಗೂ ಇರಬಹುದಲ್ಲವೇ ?

## ವಿಸ್ತರಿಸಿ ಬರೆಯಿರಿ

'ಕಾಯಕವೇ ಕೈಲಾಸ' ಎಂದ ತಕ್ಷಣ ನೆನಪಿಗೆ ಬರುವವರು ಬಸವಣ್ಣ. ಅದು ಅವರ ಕಾಯಕ ತತ್ವ. ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಹೊಟ್ಟೆಹೊರೆಯಲು ಏನೆಲ್ಲಾ ಹರಸಾಹಸ ಮಾಡುತ್ತಾನೆ. ಯಾವುದೇ ಕೆಲಸವಿರಲಿ ಅದನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡಿದಾಗ ಸಿಗುವ ತೃಪ್ತಿ ಜೀವನದಲ್ಲಿ ಸಾರ್ಥಕತೆಯನ್ನು ತರುತ್ತದೆ. ಮಾಡುವ ಕೆಲಸದಲ್ಲಿ ತೃಪ್ತಿಯಿಲ್ಲದಿದ್ದರೆ ಕೆಲಸದ ಮೇಲಿನ ಶ್ರದ್ಧೆ ಕಡಿಮೆಯಾಗುತ್ತದೆ. ಇದರಿಂದಾಗಿ ತಮ್ಮ ಕೆಲಸಕ್ಕೆ ನ್ಯಾಯವೊದಗಿಸುವಲ್ಲಿ ವಿಫಲರಾಗುತ್ತೇವೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ಕೆಲಸವನ್ನು ಮಾಡಬೇಕು. ಅದರಿಂದಲೇ ಜೀವನ ನಡೆಯಬೇಕು. ಯಾವುದೇ ಕೆಲಸ ಕೀಳಲ್ಲ ; ಯಾವುದೂ ಮೇಲಲ್ಲ, ಪ್ರತಿಯೊಂದು ಕೆಲಸಕ್ಕೂ ಅದರದ್ದೇ ಆದ ಗೌರವವಿದೆ. ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಕಾಯಕತತ್ವವೇ ಪರಿಹಾರ. ಇದು ಸಮಾಜದಲ್ಲಿರುವ ಅಸಮಾನತೆ, ದಾರಿದ್ರ್ಯಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಮೂಲ್ಯ ಸಂಪತ್ತಾದ ದೇಹವನ್ನು ಚುರುಕುಗೊಳಿಸಿ ಕಾಯಕದಲ್ಲಿ ತೊಡಗಿಸಿಕೊಂಡು ಜೀವನ ನಡೆಸಿದರೆ ದೈಹಿಕ ಹಾಗೂ ಮಾನಸಿಕ ತೃಪ್ತಿ ದೊರೆಯುವುದರೊಂದಿಗೆ ಭೂಮಿಯಲ್ಲೇ ಕೈಲಾಸವನ್ನು ಕಾಣಬಹುದು.

ಕಾಯಕನಿಷ್ಠೆ ಪಾಠದಲ್ಲಿ ಗಾಂಧೀಜಿಯವರು ಗೋಧಿಬೀಸುವುದರಿಂದ ಪಾಯಿಖಾನೆ ತೊಳೆಯುವವರೆಗೆ ಎಲ್ಲ ಕೆಲಸಗಳನ್ನು ಸ್ವತಃ ಮಾಡುತ್ತಿದ್ದರು. ಅವರು ತಮ್ಮ ಮನೆಯಲ್ಲಿ ಕೆಲಸದಾಳುಗಳನ್ನು ನೇಮಿಸುತ್ತಿರಲಿಲ್ಲ. ಝಾಡಮಾಲಿ ಮಾಡುವ ಕೆಲಸವನ್ನು ತಾನು ಮಾಡುವ ಮೂಲಕ ಕೆಲಸದ ಗೌರವವನ್ನು ಎತ್ತಿ ಹಿಡಿದರು. ತಮ್ಮ ಮನೆಯ ಕೆಲಸಗಳನ್ನು ತಾವೇ ಮಾಡುವುದರ ಮೂಲಕ ಉಳಿದವರಿಗೂ ಮಾದರಿ ಹಾಗೂ ಪ್ರೇರಣೆಯಾದರು.

# Kannada II

ಘಟಕ 3

# ವಿಜ್ಞಾನದರ್ಪಣ

ಘಟಕ 3 – ವಿಜ್ಞಾನ ದರ್ಪಣ

## ಯೂನಿಟ್ ಗ್ರಿಡ್

ತರಗತಿ 10 – ಕನ್ನಡ II

| ಪಾಠದ ಹೆಸರು | ಆಶಯ/ತಿಳುವಳಿಕೆ/ಮನೋಭಾವ | ಪ್ರಕ್ರಿಯೆ | ಪೂರಕ ಸಾಮಗ್ರಿ | ಮೌಲ್ಯನಿರ್ಣಯ |
|---|---|---|---|---|
| 3. ಸಂದರ್ಶನ ಕೌಶಲ | • ಸಂದರ್ಶನ ಒಂದು ಉತ್ತಮ ಕೌಶಲವಾಗಿದೆ. ರೇಡಿಯೋ, ದೂರದರ್ಶನಗಳಲ್ಲಿ ಮೂಡಿಬರುವ ಸಂದರ್ಶನಗಳಿಂದ ಅಮೂಲ್ಯ ಮಾಹಿತಿಗಳು ಲಭ್ಯವಾಗುವುದು.<br>• ಸಂದರ್ಶನಗಳ ಮೂಲಕ ತೆರೆಯ ಮರೆಯ ಸಾಧಕರು ಬೆಳಕಿಗೆ ಬರುತ್ತಾರೆ. | • ಪ್ರತಿಕ್ರಿಯೆ ಸಂದೇಶ ಬರೆಯುವುದು.<br>• ಸಂದರ್ಶನಾ ಪ್ರಶ್ನಾವಳಿ ತಯಾರಿಸುವುದು<br>• ಮನವಿ ಪತ್ರ ಬರೆಯುವುದು.<br>• ಭಿತ್ತಿಪತ್ರ ರಚಿಸುವುದು<br>• ವಾರ್ತೆಗಳ ಮುಖ್ಯಾಂಶಗಳನ್ನು ಬರೆಯುವುದು. | • ಸಂದರ್ಶನಗಳ ಸಿ.ಡಿ.<br>• ಪ್ರಶ್ನಾವಳಿಗಳ ಮಾದರಿ<br>• ಭಿತ್ತಿಪತ್ರ ಮಾದರಿ<br>• ವಾರ್ತಾಪತ್ರಿಕೆಗಳು | • ಪ್ರತಿಕ್ರಿಯೆ<br>• ಪ್ರಶ್ನೆಗಳು<br>• ಮನವಿ ಪತ್ರ<br>• ಭಿತ್ತಿಪತ್ರ<br>• ವಾರ್ತೆಗಳ ಮುಖ್ಯಾಂಶಗಳು |

## ವಿಜ್ಞಾನದರ್ಪಣ

ವಿಜ್ಞಾನ ದರ್ಪಣ ಎಂಬ ಘಟಕವು ವೈಜ್ಞಾನಿಕ ಸಾಧನೆಗಳು, ವಿಜ್ಞಾನಿಗಳ ಕೊಡುಗೆಗಳು ಮತ್ತು ದೈನಂದಿನ ಬದುಕಿನ ಮೇಲೆ ವೈಜ್ಞಾನಿಕ ಸಂಶೋಧನೆಗಳ ಪ್ರಭಾವ ಮುಂತಾದ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ನಿಖರವಾಗಿ ತಲುಪಿಸಲು ಸಹಾಯಕವಾಗುವುದು. ಆಧುನಿಕ ವಿದ್ಯಾಭ್ಯಾಸ ಪದ್ಧತಿಯಲ್ಲಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಗಳು ಮೂಡಬೇಕು ಹಾಗೂ ವಿವಿಧ ವೃತ್ತಿ ಕೌಶಲಗಳು ಬೆಳೆಯಬೇಕು ಎಂಬ ಆಶಯಗಳು ಪ್ರಮುಖವಾಗಿವೆ. ಈ ದೃಷ್ಟಿಯಲ್ಲಿ ಪ್ರಸ್ತುತ ಘಟಕದಲ್ಲಿ 'ಮೊಳಕೆಯ ಸಿರಿ' ಎಂಬ ಪಾಠವನ್ನು ಆಕರ ಗ್ರಂಥಗಳ ಸಹಾಯದೊಂದಿಗೆ ಪರಿಷ್ಕರಿಸಲಾಗಿದೆ. ಹಾಗೆಯೇ ಸಂದರ್ಶನ ಕೌಶಲ ಎಂಬ ಪಾಠದ ಮೂಲಕ ವಿದ್ಯಾರ್ಥಿಗಳಲ್ಲಿ ಸಮೂಹ ಮಾಧ್ಯಮಗಳಲ್ಲಿ ಸೇವೆ ಸಲ್ಲಿಸುವ ಕೌಶಲವನ್ನು ಬೆಳೆಸುವ ಉದ್ದೇಶವನ್ನು ಹೊಂದಲಾಗಿದೆ. ಐಟಿಯ ಬಳಕೆಯೊಂದಿಗೆ ಸಮರ್ಪಕ ಸಮೀಪನದ ಮೂಲಕ ಈ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗಬಹುದು.

## ಮೊಳಕೆಯ ಸಿರಿ

ಯೂಟ್ಯೂಬ್‌ನಲ್ಲಿ ಲಭ್ಯವಿರುವ ಸ್ಟೀಫನ್ ಹಾಕಿಂಗ್‌ನ 1ರಿಂದ 75 ವರ್ಷಗಳ ಜೀವನ ಯಾನದ ಕಿರುಚಿತ್ರವನ್ನು ಪ್ರದರ್ಶಿಸುವುದು. ಅದನ್ನು ವೀಕ್ಷಿಸಿದ ಬಳಿಕ ವಿದ್ಯಾರ್ಥಿಗಳು ಸ್ಟೀಫನ್‌ನ ವ್ಯಕ್ತಿಚಿತ್ರಣವನ್ನು ಗುಂಪಿನಲ್ಲಿ ಚರ್ಚಿಸಿ ಬರೆದು ಮಂಡಿಸಲಿ. ಎಲ್ಲಾ ಗುಂಪಿನಿಂದಲೂ ಮಂಡನೆಯಾದ ವಿಚಾರವನ್ನು ಅಧ್ಯಾಪಕರ ಸಹಾಯದೊಂದಿಗೆ ವಿದ್ಯಾರ್ಥಿಗಳು ಕ್ರೋಡೀಕರಿಸಿ ವೈಯಕ್ತಿಕವಾಗಿ ಬರೆದುಕೊಳ್ಳಲಿ. ಬಳಿಕ 'ಮೊಳಕೆಯ ಸಿರಿ' ಪಾಠವನ್ನು ಸರದಿ ಓದಿನ ಮೂಲಕ ಓದಲಿ. ವಿದ್ಯಾರ್ಥಿಗಳು ಕಠಿಣ ಪದಗಳ ಅರ್ಥ, ಅನ್ಯದೇಶೀಯ ಪದಗಳು, ಪದವಿಂಗಡಣೆ ಇತ್ಯಾದಿಗಳನ್ನು ವೈಯಕ್ತಿಕವಾಗಿ ಗುರುತಿಸಿಕೊಳ್ಳಲಿ. ಅಗತ್ಯವಿರುವಲ್ಲಿ ಅಧ್ಯಾಪಕರು ಸಹಕರಿಸುವುದು.

## ಸಮರ್ಥಿಸಿ ಬರೆಯುವುದು

ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಸ್ಟೀಫನ್ ಹಾಕಿಂಗ್‌ನ ದೈಹಿಕ ದೌರ್ಬಲ್ಯಗಳು ಹಾಗೂ ಅದನ್ನು ಮೆಟ್ಟಿನಿಂತು ಅವನು ಸಾಧಿಸಿದ ಸಾಧನೆಗಳ ಕುರಿತು ಕಿರು ಟಿಪ್ಪಣಿ ಬರೆಯಲಿ. ಅವನ ಅಂಗವಿಕಲತೆ ಸಾಧನೆಗೆ ಅಡ್ಡಿಯಾಗಲಿಲ್ಲ ಎಂಬುದನ್ನು. ಈ ಉದಾಹರಣೆಗಳೊಂದಿಗೆ ಸಮರ್ಥಿಸಿ ಬರೆಯಲಿ. ಗುಂಪಿನಲ್ಲಿ ಒಬ್ಬೊಬ್ಬರು ಮಂಡಿಸಿದ ಬಳಿಕ ಅಧ್ಯಾಪಕರ ಸಹಾಯದೊಂದಿಗೆ ವೈಯಕ್ತಿಕವಾಗಿ ಪರಿಷ್ಕರಿಸಿ ಬರೆಯಲಿ.

## ಸಮರ್ಥಿಸಿ ಬರೆಯುವುದು ಹೀಗೂ ಇರಬಹುದು

ಬಾಲ್ಯದಲ್ಲೆ ಪ್ರತಿಭಾನ್ವಿತರಾಗಿದ್ದ ಸ್ಟೀಫನ್ ಹಾಕಿಂಗ್ ಎಳೆಯ ಪ್ರಾಯದಲ್ಲೆ ಮೋಟಾರ್ ನ್ಯೂರಾನ್ ರೋಗದ ಲಕ್ಷಣ ಕಾಣಿಸಿಕೊಂಡಿತ್ತು. ವಿದ್ಯಾರ್ಥಿ ದೆಸೆಯಲ್ಲೇ ಪೀಚಾದ ದೇಹ, ಕೀರಲಾದ ಧ್ವನಿಯಿಂದ ಸಹಪಾಠಿಗಳು ಹಾಕಿಂಗೀಸ ಎಂದು ಗೇಲಿ ಮಾಡಿದ್ದರೂ ಅವರು ಧೃತಿಗೆಡದೆ ತಮ್ಮ ಪಾಡಿಗೆ ತಾವಿರುತ್ತಿದ್ದರು. ತೀವ್ರ ಸಂಶೋಧನಾಸಕ್ತಿಯನ್ನು ಹೊಂದಿದ್ದ ಅವರು ಆಕ್ಸ್‌ಫರ್ಡ್ ಯೂನಿವರ್ಸಿಟಿ ಕಾಲೇಜನ್ನು ಸೇರಿ ಅಲ್ಲಿ ಉತ್ತಮ ಸಾಧನೆ ತೋರಿದ್ದರು. ಮುಂದೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆದು ಭೌತವಿಜ್ಞಾನವನ್ನು ಅಧ್ಯಯನ ಮಾಡಿದರು. ತನಗೆ ತಗುಲಿದ ರೋಗ ಮಾರಣಾಂತಿಕ ಎಂದು ಅರಿತಿದ್ದರೂ ಆತ್ಮಸ್ಥೈರ್ಯದಿಂದ ಸಂಶೋಧನೆಯನ್ನು ಮುಂದುವರಿಸಿ 'ಸ್ಪೇಸ್–ಟೈಮ್ ಸಿಂಗ್ಯುಲಾರಿಟಿ' ಎಂಬ ವಿಷಯದ ಬಗ್ಗೆ ಪಿಹೆಚ್‌ಡಿ ಪ್ರಬಂಧವನ್ನು ಮಂಡಿಸಿದರು. ಪರಿಣಾಮವಾಗಿ ಅನೇಕ ಪ್ರಶಸ್ತಿ ಪುರಸ್ಕೃತರಾದರು. ತನ್ನ ಸಂಪಾದನೆಯಿಂದ ವಿಶೇಷ ಗಾಲಿ ಕುರ್ಚಿ ಖರೀದಿಸಿಕೊಂಡು ಅದರಲ್ಲಿ ಓಡಾಡುತ್ತಾ ತನ್ನ ವಿದ್ಯಾರ್ಥಿ ನಿರ್ಮಿಸಿದ ವಿಶೇಷ ಕಂಪ್ಯೂಟರಿನ ಸಹಾಯದಿಂದ ಹಲವು ಸಭೆಗಳಲ್ಲಿ ಮಾಹಿತಿಗಳನ್ನು ವಿನಿಮಯ ಮಾಡಿದರು. ಹೀಗೆ ಮಾರಕ ರೋಗಕ್ಕೆ ತುತ್ತಾಗಿದ್ದರೂ ಆತ್ಮಸ್ಥೈರ್ಯದಿಂದಲೇ ಸಾವನ್ನು ಗೆದ್ದ ಹಾಕಿಂಗ್ ತನ್ನ ದೈಹಿಕ ವಿಕಲತೆಯನ್ನು ಲೆಕ್ಕಿಸದೆ ವೈಜ್ಞಾನಿಕ ಕ್ಷೇತ್ರಕ್ಕೆ ಅಗಾಧ ಕೊಡುಗೆಯನ್ನಿತ್ತರು. ಸಾಧಿಸಬೇಕೆಂಬ ಛಲವಿದ್ದರೆ ಯಾವುದೇ ಅಂಗವೈಕಲ್ಯಗಳು ಅಡ್ಡಿಯಾಗಲಾರವು ಎಂಬುದಕ್ಕೆ ಸ್ಟೀಫನ್ ಹಾಕಿಂಗ್ ಒಬ್ಬ ಉತ್ತಮ ಉದಾಹರಣೆ.

***

# ಸಂದರ್ಶನ ಕೌಶಲ

ಸಂದರ್ಶನ ಎಂದರೇನು? ಅದರ ಸ್ವರೂಪವೇನು? ಅಲ್ಲಿ ಯಾವ ವಿಚಾರಗಳಿಗೆ ಒತ್ತು ನೀಡಲಾಗುವುದು ಮುಂತಾದ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೇಳಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸುವುದು. ಆ ಮೂಲಕ ಸಂದರ್ಶನದ ಕುರಿತಾದ ವಿಚಾರಗಳನ್ನು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳೂ ಬರೆದುಕೊಳ್ಳಲಿ. ಬಳಿಕ ವಿದ್ಯಾರ್ಥಿಗಳು ಸರಣಿ ಓದನ್ನು ನಡೆಸಲಿ. ತರಗತಿಯ ಹೆಚ್ಚಿನ ವಿದ್ಯಾರ್ಥಿಗಳಿಗೆ ಓದುವ ಅವಕಾಶ ಲಭ್ಯವಾದ ಬಳಿಕ ವಿದ್ಯಾರ್ಥಿಗಳು ಕಠಿಣ ಪದಗಳು, ಅನ್ಯದೇಶೀಯ ಪದಗಳನ್ನು ಗುರುತಿಸಲಿ.ಅಧ್ಯಾಪಕರು ಅವುಗಳನ್ನು ಕರಿಹಲಗೆಯಲ್ಲಿ ಬರೆಯುವುದು, ಅವುಗಳ ಅರ್ಥ ಸಂವಾದಿ ಪದಗಳನ್ನು ಅಧ್ಯಾಪಕರ ಸಹಾಯದೊಂದಿಗೆ ವಿದ್ಯಾರ್ಥಿಗಳು ತಮ್ಮ ಪುಸ್ತಕದಲ್ಲಿ ಬರೆದುಕೊಳ್ಳಲಿ. ಆರಂಭದಲ್ಲಿ ವಿದ್ಯಾರ್ಥಿಗಳು ಸಂದರ್ಶನದ ಬಗ್ಗೆ ಹೇಳಿದ ವಿಚಾರಗಳು ಪಾಠದಲ್ಲಿ ಉಲ್ಲೇಖವಾಗಿದೆಯೋ ಅಥವಾ ವ್ಯತ್ಯಸ್ತವಾಗಿ ಹೇಳಲಾಗಿದೆಯೋ ಎಂದು ಗುರುತಿಸಲಿ.

**ಉತ್ತರವನ್ನು ಬರೆಯುವುದು.**

ಉತ್ತರವನ್ನು ಗುಂಪಿನಲ್ಲಿ ಚರ್ಚಿಸಿ ಪಾಠದಿಂದ ಆಯ್ದು ಬರೆಯಲಿ. ಬಳಿಕ ಗುಂಪಿನಿಂದ ಒಬ್ಬೊಬ್ಬರು ಒಂದೊಂದು ಪ್ರಶ್ನೆಯ ಉತ್ತರವನ್ನು ಮಂಡಿಸಲಿ. ವ್ಯತ್ಯಾಸವಿದ್ದರೆ ಅಧ್ಯಾಪಕರ ಸಹಾಯದೊಂದಿಗೆ ಚರ್ಚಿಸಿ ಉತ್ತಮಪಡಿಸಿ ಬರೆಯಲಿ.

- **ಪ್ರತಿಕ್ರಿಯೆ ಸಂದೇಶ ಬರೆಯುವುದು**

ಯಾವುದಾದರೊಂದು ಟಿ.ವಿ.ವಾಹಿನಿಯಲ್ಲಿ ಪ್ರದರ್ಶನಗೊಂಡ ಸಂದರ್ಶನವನ್ನು ನೇರ ಅಥವಾ youtube ಸಹಾಯದಿಂದ ಪ್ರದರ್ಶಿಸುವುದು.

ಉದಾ: Jayanth kaikini - full interview - youtube
http://m.youtube.com/watch tv-0758mqvtsv8

ಅದನ್ನು ವೀಕ್ಷಿಸಿದ ಬಳಿಕ ವಿದ್ಯಾರ್ಥಿಗಳಲ್ಲಿ ಅದರ ಗುಣಾತ್ಮಕ ಅಂಶಗಳನ್ನು ಗುರುತಿಸಿ ಬರೆಯಲು ಹೇಳುವುದು. ವಿದ್ಯಾರ್ಥಿಗಳಲ್ಲಿ ಕೆಲವರು ತಾವು ಬರೆದ ಆ ಅಂಶಗಳನ್ನು ಮಂಡಿಸಲಿ. ಅಧ್ಯಾಪಕರು ತಮ್ಮ ಅಭಿಪ್ರಾಯಗಳನ್ನು ಸೇರಿಸಿ ಉತ್ತಮಪಡಿಸುವುದು. ಬಳಿಕ ವಿದ್ಯಾರ್ಥಿಗಳು ತಮ್ಮ ಇ–ಮೈಲ್ ಖಾತೆಯನ್ನು ತೆರೆದು ಬೆರಳಚ್ಚು ಮಾಡಿ ಯಾವುದಾದರೂ ಒಂದು ಮಿಂಚಂಚೆ ವಿಳಾಸಕ್ಕೆ (ಅಭ್ಯಾಸಕ್ಕಾಗಿ ಪರಸ್ಪರ ವಿದ್ಯಾರ್ಥಿಗಳ ವಿಳಾಸಗಳಾಗಬಹುದು) ಕಳುಹಿಸಲಿ.

**ಪ್ರತಿಕ್ರಿಯೆ ಸಂದೇಶ ಹೀಗೂ ಇರಬಹುದು.**

ಇವರಿಂದ

ಅಭಿಷೇಕ್

ಭಾರತಿ ಪ್ರೌಢಶಾಲೆ

ವಿದ್ಯಾನಗರ

ಕಾಸರಗೋಡು

ಇವರಿಗೆ

ನಿಲಯ ನಿರ್ದೇಶಕರು

ಪಬ್ಲಿಕ್ ಟಿ.ವಿ

ಬೆಂಗಳೂರು

ಮಾನ್ಯರೆ,

ತಮ್ಮ ವಾಹಿನಿಯಲ್ಲಿ ಪ್ರಸಾರವಾಗುವ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮವನ್ನು ನಿರಂತರ ವೀಕ್ಷಿಸುತ್ತಿದ್ದೇವೆ. ರಂಗನಾಥರವರು ನಡೆಸಿಕೊಡುವ ಈ ಕಾರ್ಯಕ್ರಮ ಬಹಳ ಉತ್ತಮವಾಗಿ ಮೂಡಿ ಬರುತ್ತಿದೆ. ಕಳೆದ ಶುಕ್ರವಾರ ಹಿರಿಯ ಸಾಹಿತಿ ಶ್ರೀ ಜಯಂತ್ ಕಾಯ್ಕಿಣಿಯವರ ಸಂದರ್ಶನ ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂತು. ಅವರ ಸಾಹಿತ್ಯ ಸಾಧನೆಗೆ ಸಂಬಂಧಿಸಿದ ಮಾಹಿತಿ ಲಭ್ಯವಾಗುವಂತೆ ಕೇಳಲಾದ ಪ್ರಶ್ನಾವಳಿಗಳು ಸೂಕ್ತವಾಗಿತ್ತು. ಸಂದರ್ಶಕರು ಯುವಲೇಖಕರಿಗೆ ಸಂದೇಶ ನೀಡುವಂತೆ ಕಾಯ್ಕಿಣಿಯವರಲ್ಲಿ ಕೋರಿಕೊಂಡದ್ದು ಉತ್ತಮ ಪ್ರೇರಣೆ ನೀಡುವ ಅಂಶವಾಗಿದೆ. ಸಂದರ್ಶನದ ಸಂವಹನ, ಚಿತ್ರೀಕರಣ, ಧ್ವನಿ ಪ್ರಸಾರ ಚೆನ್ನಾಗಿದ್ದವು. ಇಂತಹ ಉತ್ತಮ ಸಂದರ್ಶನ ಕಾರ್ಯಕ್ರಮವನ್ನು ಪ್ರಸಾರ ಮಾಡಿದ ತಮಗೆ ಕೃತಜ್ಞತೆಗಳು. ಇನ್ನು ಮುಂದೆಯೂ ಇಂತಹ ಕಾರ್ಯಕ್ರಮಗಳು ಮೂಡಿಬರಲಿ ಎಂದು ಹಾರೈಸುತ್ತೇನೆ.

ವಂದನೆಗಳೊಂದಿಗೆ,

ಸ್ಥಳ : ಕಾಸರಗೋಡು

ದಿನಾಂಕ: 15.2.2019

ಅಭಿಷೇಕ್

## ✦ ಸಂದರ್ಶನ ಪ್ರಶ್ನಾವಳಿ ತಯಾರಿಸುವುದು

ವಿದ್ಯಾರ್ಥಿಗಳು ತಮ್ಮ ಊರಿನಲ್ಲಿ ಕೃಷಿ, ಕಲೆ, ಸಾಂಸ್ಕೃತಿಕ ರಂಗ, ವಿದ್ಯಾಭ್ಯಾಸ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದವರನ್ನು ಹೆಸರಿಸಲಿ. ಈಗಾಗಲೇ ಸಂದರ್ಶನದ ಮಾದರಿಯನ್ನು ವಿದ್ಯಾರ್ಥಿಗಳು ವೀಕ್ಷಿಸಿರುವರು. ಅದರ ಆಧಾರದಲ್ಲಿ ಸಂದರ್ಶಕರ ಸಾಧನಾ ಕ್ಷೇತ್ರಕ್ಕೆ ಸಂಬಂಧಿಸಿ ಯಾವೆಲ್ಲಾ ಪ್ರಶ್ನೆಗಳನ್ನು ಕೇಳಬಹುದೆಂದು ಗುಂಪಿನಲ್ಲಿ ಬರೆಯಲಿ. ಗುಂಪಿನಲ್ಲಿ ರಚಿಸಿದ ಪ್ರಶ್ನಾವಳಿಗಳನ್ನು ಮಂಡಿಸಿದ ಬಳಿಕ ಅಧ್ಯಾಪಕರ ಸಹಾಯದೊಂದಿಗೆ ತಿದ್ದಿಕೊಂಡು ಬರೆಯಲಿ.

ಸಂದರ್ಶನ ಪ್ರಶ್ನಾವಳಿ ಹೀಗೂ ಇರಬಹುದು (ಕೃಷಿಕ)

- ನಮಸ್ಕಾರ, ತಾವು ಪ್ರಗತಿಪರ ಕೃಷಿಕರು. ತಮಗೆ ಕೃಷಿಯಲ್ಲಿ ಒಲವು ಮೂಡಿದುದು ಹೇಗೆ?
- ಅಡಿಕೆ ಕೃಷಿ ನಿರ್ವಹಣೆಯ ಬಗ್ಗೆ ಮಾಹಿತಿ ನೀಡುವಿರಾ?
- ಅಡಿಕೆ ಕೃಷಿ ಯಾವ ಪ್ರದೇಶಕ್ಕೆ ಸೂಕ್ತವಾಗಿರುವುದು?
- ಅಡಿಕೆ ಬೆಳೆಗೆ ಬರುವ ವಿವಿಧ ರೋಗಗಳು ಯಾವುವು?
- ಅದನ್ನು ತಡೆಗಟ್ಟುವ ದಾರಿ ಯಾವುದು?
- ರಸಗೊಬ್ಬರ ಬಳಕೆಯ ಬಗ್ಗೆ ತಮ್ಮ ಅಭಿಪ್ರಾಯವೇನು?
- ಸಾವಯವ ಗೊಬ್ಬರ ಮಾತ್ರ ಬಳಸುವುದರಿಂದ ಇಳುವರಿಯ ಮೇಲಾಗುವ ಪರಿಣಾಮವೇನು?
- ಅಡಿಕೆ ಬೆಳೆಯ ಜೊತೆ ಮಾಡಬಹುದಾದ ಉಪಬೆಳೆಗಳು ಯಾವುವು?
- ನೀರುಣಿಸುವ ವಿವಿಧ ಸಾಧ್ಯತೆಗಳು ಯಾವುವು? ಇವುಗಳಲ್ಲಿ ಯಾವುದು ಸೂಕ್ತ?
-
-
-

## ✦ ಮನವಿ ಪತ್ರ ಬರೆಯುವುದು

ವೈಯಕ್ತಿಕ ಹಾಗು ವ್ಯಾವಹಾರಿಕ ಪತ್ರಗಳನ್ನು ಬರೆಯುವ ವಿಧಾನವನ್ನು ವಿದ್ಯಾರ್ಥಿಗಳು ಈಗಾಗಲೇ ಹಿಂದಿನ ತರಗತಿಯಲ್ಲಿ ಚರ್ಚಿಸಿರುವರು. ಒಂದೆರಡು ಮನವಿ ಪತ್ರಗಳ ಮಾದರಿಗಳನ್ನು ಎಲ್.ಸಿ.ಡಿ. ಪ್ರೊಜೆಕ್ಟರ್‌ನ ಮೂಲಕ ತೋರಿಸುವುದು. ಇದರ ಕುರಿತಾಗಿ ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಕಂಡುಕೊಂಡ ಅಂಶಗಳನ್ನು ವೈಯಕ್ತಿಕವಾಗಿ ಬರೆಯಲು ಸೂಚಿಸುವುದು. ಉದಾ:ಕಳುಹಿಸುವವರ ವಿಳಾಸ, ಕಳುಹಿಸಬೇಕಾದವರ ವಿಳಾಸ, ಸಂಬೋಧನೆ, ವಿಷಯ, ವಿವರಣೆ ಮುಕ್ತಾಯ, ಸ್ಥಳ, ತಾರೀಕು ಇತ್ಯಾದಿ ಪತ್ರದ ಸ್ವರೂಪಗಳನ್ನು ತಿಳಿದುಕೊಳ್ಳುವುದು. ವಿದ್ಯಾರ್ಥಿಗಳು ತಮ್ಮ ಊರಿನ ಸಾಧಕರನ್ನು ಸಂದರ್ಶಿಸುವಂತೆ ವಿನಂತಿಸುವ ಮನವಿ ಪತ್ರ ಬರೆಯಲಿ. ಗುಂಪಿನಲ್ಲಿ ಬರೆದ ಪತ್ರವನ್ನು ಓದಿದ ಬಳಿಕ ಅಧ್ಯಾಪಕರು ಸೂಕ್ತ ಮಾಹಿತಿ ನೀಡಿದ ಆಧಾರದಲ್ಲಿ ಸರಿಪಡಿಸಿ ಬರೆಯುವುದು.

**ಮನವಿ ಪತ್ರ ಹೀಗೂ ಇರಬಹುದು.**

ಇವರಿಂದ

ಶರಣ್ಯ ಕೆ.

ಭಾರತೀ ಪ್ರೌಢಶಾಲೆ

ವಿದ್ಯಾನಗರ, ಕಾಸರಗೋಡು

ಇವರಿಗೆ

ನಿಲಯ ನಿರ್ದೇಶಕರು

ಚಂದನವಾಹಿನಿ

ಬೆಂಗಳೂರು

ಮಾನ್ಯರೆ,

ವಿಷಯ: ಸಾಧಕರನ್ನು ಸಂದರ್ಶಿಸಿಬೇಕೆಂದು ಕೋರುವ ಬಗ್ಗೆ

ಕಾಸರಗೋಡು ಹಲವು ಕಲೆಗಳ ನೆಲೆಬೀಡು. ಇಲ್ಲಿ ಹಲವಾರು ಕಲಾವಿದರು ತಮ್ಮ ಕೊಡುಗೆಗಳನ್ನು ನೀಡಿ ಈ ನೆಲದ ಘನತೆಯನ್ನು ಹೆಚ್ಚಿಸಿರುವರು. ಪ್ರಸ್ತುತ ಉತ್ತಮ ನಾಟಕ ಕಲಾವಿದರಾಗಿರುವ ಶ್ರೀ ಶ್ರೀಧರ ಕಾಸರಗೋಡು ಇವರು ನಾಟಕ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿರುವರು. ಅವರನ್ನು ತಮ್ಮ ಟಿ.ವಿ. ವಾಹಿನಿಯು ಸಂದರ್ಶನ ನಡೆಸಿ ಬಿತ್ತರಿಸಿ ಅವರ ಸಾಧನೆಯನ್ನು ದೇಶದಾದ್ಯಂತ ಜನರಿಗೆ ಅರಿಯುವಂತೆ ಮಾಡಬೇಕೆಂದು ವಿನಂತಿಸುತ್ತೇನೆ. ಈ ಕಾರ್ಯವು ಒಂದು ಕಲಾ ಬೆಳವಣಿಗೆಗೆ ಸಹಕಾರಿಯಾಗುವುದು ಹಾಗೂ ಆ ಮೂಲಕ ಆ ಕಲಾವಿದರೂ ಹೆಚ್ಚು ಸಾಧಿಸಲು ಸಾಧ್ಯವಾಗುವುದು. ಆದ್ದರಿಂದ ಅವರ ಸಂದರ್ಶನ ನಡೆಸಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

ಇತಿ ತಮ್ಮ ವಿಶ್ವಾಸಿ

ಸ್ಥಳ : ಕಾಸರಗೋಡು

ದಿನಾಂಕ : 10.3.2019

ಶರಣ್ಯ ಕೆ.

**ಸಂದರ್ಶನ ನಡೆಸುವುದು.**

ಈಗಾಗಲೇ ವಿದ್ಯಾರ್ಥಿಗಳು ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸಿರುವರು. ಆ ಸಾಧಕರನ್ನು ಆಹ್ವಾನಿಸಿ ತರಗತಿಯಲ್ಲಿ ಸಂದರ್ಶನ ನಡೆಸಬಹುದು. ಆಗ ಮಾಡಿಕೊಳ್ಳಬೇಕಾದ ಪೂರ್ವ ತಯಾರಿಯ ಬಗ್ಗೆ ಚರ್ಚೆ ನಡೆಯಲಿ. ತರಗತಿಯ ಯಾರಾದರೂ ಒಬ್ಬರು ಅಥವಾ ಇಬ್ಬರು ಸಂದರ್ಶಕರಾಗಲಿ. ಉಳಿದವರು ವೀಕ್ಷಕರಾಗಬಹುದು. ಅವರು ಪಾಠಗಳಲ್ಲಿ ಹೇಳಿರುವಂತೆ ವ್ಯವಹರಿಸುವುದು ಉತ್ತಮ. ಸಂದರ್ಶಿಸುವ ಸಮಯದಲ್ಲಿ ಪ್ರಶ್ನಾವಳಿಗಳಿಗೆ ಹೊರತಾಗಿ ಪೂರಕ ಪ್ರಶ್ನೆಗಳನ್ನು ಕೇಳಲು ಸಂದರ್ಶಕ ವಿದ್ಯಾರ್ಥಿ ಸಿದ್ಧರಾಗಲಿ. ಪೂರ್ವ ತಯಾರಿಯ ಪ್ರಶ್ನೆಗಳಲ್ಲಿ ಕೆಲವು ಸಂದರ್ಭವಶಾತ್ ಅನಗತ್ಯವಾದರೆ ಕೇಳದೆ ಇರುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಶಾಲೆಯ ಅಥವಾ ತರಗತಿಯ ಉತ್ತಮ ವೀಡಿಯೋಗ್ರಾಫರ್ ವಿದ್ಯಾರ್ಥಿಗಳಿದ್ದೆ ಶಾಲಾ ಕ್ಯಾಮರಾದ ಮೂಲಕ ಚಿತ್ರೀಕರಿಸಿ ಬ್ಲೋಗುಗಳಿಗೆ ಅಪ್ ಲೋಡ್ ಮಾಡಬಹುದು. ಒಟ್ಟು ಕಾರ್ಯಕ್ರಮಗಳಿಗೆ ಅಧ್ಯಾಪಕರು ಮೇಲ್ನೋಟ ವಹಿಸಿಕೊಳ್ಳುವುದು.

**ಸಂದರ್ಶನದ ಪೂರ್ವತಯಾರಿ ಹೀಗೂ ಮಾಡಬಹುದು.**

- ಸಂದರ್ಶಿಸಬೇಕಾದ ಸಾಧಕರ ಆಯ್ಕೆ
- ಸಂದರ್ಶಿಸುವವರಲ್ಲಿ ಕೇಳಬೇಕಾದ ಪ್ರಶ್ನೆಗಳತಯಾರಿ
- ತರಗತಿಯ ವಿದ್ಯಾರ್ಥಿಗಳಿಂದ ಸಂದರ್ಶಕರ ಆಯ್ಕೆ
- ವೀಡಿಯೋಗ್ರಾಫರ ಆಯ್ಕೆ
- ಸಂದರ್ಶನ ಕೊಠಡಿ ಆಯ್ಕೆ
- 

**ಹೆಚ್ಚಿನ ಓದಿಗಾಗಿ**

- ನೀವು ಅತ್ಯುತ್ತಮ ಸಂದರ್ಶಕ ಆಗ ಬಯಸುತ್ತೀರಾ?
  ಲೇ – ಅರುಣ ಕುಮಾರ ಹಬ್ಬು

***